**(1).**

# DIET ROLES AND FUNCTIONS

**1. ನಮ್ಮ ಜಿಲ್ಲೆಯ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳ ಪಟ್ಟಿ :**

ಸಮುದಾಯ ಒಡೆತನದ ಮೂಲಕ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಮುಖ್ಯವಾದ ಉದ್ದೇಶವಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಹಾಜರಾತಿ ಮತ್ತು ಸಾರ್ವತ್ರಿಕ ಸಾಧನೆಯಲ್ಲಿ ಇಲಾಖೆಯ ಜತೆಯಲ್ಲಿ ಬೇರೆ ಬೇರೆ ಸಂಸ್ಥೆಗಳು ಪಾಲ್ಗೊಂಡು ಗುಣಮಟ್ಟ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಶ್ರಮಿಸುತ್ತಿವೆ.

ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿರುವ ಸಂಸ್ಥೆಗಳು :

1. ವೆಲೋರೆಡ್
2. ಡೀಡ್ಸ್
3. ಜಮ್ಮೈತ್ ಉಲ್ ಫಲಾಲ್
4. ಪ್ರಜ್ಞಾ ಸಲಹಾ ಕೇಂದ್ರ
5. ಮಗು ಮಧುರ ಕಲಿಕೆ
6. ಸಮೀಕ್ಷಾ ಟ್ರಸ್ಟ್ : ಮಕ್ಕಳ ಆರೋಗ್ಯದ ಅಭಿವೃದ್ಧಿಯಲ್ಲಿ ಈ ಸಂಸ್ಥೆ ಕಾರ್ಯನಿರ್ವಹಿಸುತ್ತಿದೆ
7. ಟೀಚರ್ಸ್ ಫೌಂಡೇಶನ್ : ಶಿಕ್ಷಕರ ಸೇವಾ ಪರಿಣತಿಯನ್ನು ಅಭಿವೃದ್ಧಿಪಡಿಸಲು ಅನೇಕ ತರಬೇತಿಗಳನ್ನು ಹಮ್ಮಿಕೊಳ್ಳುತ್ತಿದೆ
8. Canara Organization for Development & Peace : ಆರ್ಥಿಕ ಕಾರಣಗಳಿಗಾಗಿ ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ಹಣಕಾಸಿನ ಸಹಕಾರವನ್ನು ಈ ಸಂಸ್ಥೆ ನೀಡುತ್ತದೆ.

**ಈ ಸಂಸ್ಥೆಗಳು** :

1. ಜಿಲ್ಲಾ ಪಂಚಾಯತ್/ತಾಲೂಕು ಪಂಚಾಯತ್ ಸದಸ್ಯರಿಗೆ ಡಯಟ್ ಮತ್ತು ಎಸ್.ಎಸ್.ಎ ಸಹಕಾರದೊಂದಿಗೆ ಶಿಕ್ಷಣದ ಸಾರ್ವತ್ರೀಕರಣದ ಮಹತ್ವ, ಇದಕ್ಕೆ ಜನಪ್ರತಿನಿಧಿಗಳ ಸಹಕಾರ ಹಾಗೂ ಎಸ್.ಎಸ್.ಎ ಕಾರ್ಯಕ್ರಮ ಮತ್ತು ಇಲಾಖೆಯ ಸಮಗ್ರ ಕಾರ್ಯಕ್ರಮದ ಅರಿವನ್ನು ಮೂಡಿಸುತ್ತಿವೆ.

2. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆ, ಸದಸ್ಯರಿಗೆ ತರಬೇತಿಯನ್ನು ನೀಡಿ ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದ ಮಹತ್ವನ್ನು ತಿಳಿಸುತ್ತಿವೆ.

3. ಹೆಣ್ಣು ಮಕ್ಕಳ ಜಾಗೃತಿ ಶಿಭಿರವನ್ನು ಕೈಗೊಂಡು ಅವರಲ್ಲಿ ಶಿಕ್ಷಣದ ಅರಿವನ್ನು ಮೂಡಿಸುವುದು.

4. ಇಲಾಖೆಯ ಸಹಕಾರದೊಂದಿಗೆ ಅನೇಕ ತರಬೇತಿ, ಕಾರ್ಯಾಗಾರ, ಸೆಮಿನಾರ್ ಗಳಲ್ಲಿ ಪಾಲ್ಗೊಂಡು ಗುಣಮಟ್ಟದ ಪ್ರಾಥಮಿಕ ಶಿಕ್ಷಣಕ್ಕಾಗಿ ಶ್ರಮಿಸುತ್ತಿವೆ.

೨. ಆರ್.ಇ.ಎಂ.ಎಸ್ ಕಾರ್ಯ ಚಟುವಟಿಕೆಯ ಕ್ಷೇತ್ರ ಭೇಟಿ, ಅನೇಕ ಅಧ್ಯಯನ, ಸಂಶೋಧನೆಗಳಲ್ಲಿ ಸಕ್ರೀಯ ಪಾಲ್ಗೊಂಡು ಅಮೂಲ್ಯ, ಅಗತ್ಯ ಸಲಹೆ ಸೂಚನೆ ನೀಡುತ್ತಿವೆ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

ಭವ್ಯ ಭಾರತದ ಭವಿಷ್ಯವು ನಮ್ಮ ತರಗತಿಗಳಲ್ಲಿ ರೂಪಿತವಾಗುತ್ತಿದೆ.
ಡಾ. ಸರ್ವಪಲ್ಲಿ ರಾಧಾಕೃಷ್ಣನ್

**2. ಸೇವಾ ಪೂರ್ವ ಹಾಗೂ ಸೇವಾವಧಿ ತರಬೇತಿಗಳ ಗುಣಾತ್ಮಕ ಅಭಿವೃದ್ಧಿಯ ಉದ್ದೇಶಕ್ಕಾಗಿ ಡಯಟ್‌ನ ವಿವಿಧ ವಿಭಾಗಗಳು ಹೇಗೆ ಪರಸ್ಪರ ಸಂಬಂಧ(ಅಂತರ್ ಸಂಪರ್ಕ) ಹೊಂದಿದೆ ಎಂಬುದರ ಬಗ್ಗೆ :**

1986 ರ ರಾಷ್ಟ್ರೀಯ ಶಿಕ್ಷಣ ನೀತಿಯ ಧ್ಯೇಯೋದ್ದೇಶಗಳನ್ನು ಹೊಂದಿರುವ ಡಯಟ್ ಸಂಸ್ಥೆ ಜಿಲ್ಲಾ ಸಂಪನ್ಮೂಲ ಅಧ್ಯಯನ ಕೇಂದ್ರವಾಗಿದ್ದು, ತನ್ನ ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರಾಥಮಿಕ ಶಾಲಾ ಶಿಕ್ಷಕರ ಶೈಕ್ಷಣಿಕ ಗುಣಮಟ್ಟ ಸುಧಾರಣೆಗೆ ಶ್ರಮಿಸುತ್ತದೆ. ಪ್ರಾಥಮಿಕ ಶಾಲಾ ಶಿಕ್ಷಕರ ತರಬೇತಿಯ ಮೂಲಕ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸುವುದು ಡಯಟ್‌ನ ಪ್ರಮುಖ ಗುರಿಯಾಗಿದೆ.

ಡಯಟ್ ಮಾರ್ಗಸೂಚಿಯಲ್ಲಿ ವಿಭಾಗಾವಾರು ಸಾಂಸ್ಥಿಕ ರಚನೆಯ ಸ್ವರೂಪವನ್ನು ನೀಡಿದ್ದರೂ ಪ್ರಾಯೋಗಿಕವಾಗಿ ಇಡೀ ಡಯಟ್ ಒಂದು ಘಟಕವಾಗಿ ನಿರೂಪಿಸಲ್ಪಟ್ಟ ಗುರಿ, ಉದ್ದೇಶಗಳಿಗೆ ತಕ್ಕಂತೆ ಕಾರ್ಯನಿರ್ವಹಿಸಬೇಕಾಗುತ್ತದೆ. ಈ ದೃಷ್ಠಿಯಿಂದ ಡಯಟ್ ಹಾಕಿಕೊಂಡಿರುವ ಗುರಿ, ಉದ್ದೇಶಗಳ ಸಾಧನೆಗೆ ಡಯಟ್‌ನ ಎಲ್ಲಾ ಸಿಬ್ಬಂದಿ ಶ್ರಮಿಸಬೇಕಾಗುತ್ತದೆ. ಡಯಟ್‌ನ ವಿವಿಧ ವಿಭಾಗಗಳು ಸ್ವತಂತ್ರವಾಗಿದ್ದು ಬೇರೆ ಬೇರೆಯಾಗಿ ಕಾರ್ಯನಿರ್ವಹಿಸುವುದಕ್ಕಿಂತ ಸಮನ್ವಯದಿಂದ, ಮಾಹಿತಿ ಮತ್ತಿತರ ಸಂಪನ್ಮೂಲಗಳ ಪರಸ್ಪರ ಹಂಚಿಕೆಯೊಂದಿಗೆ ಸಮಗ್ರವಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಅಂದರೆ ಡಯಟ್‌ನ ಯಾವುದೇ ಕಾರ್ಯವನ್ನು ವಿಭಾಗವಾರು ನೋಡುವುದಕ್ಕಿಂತ ಇಡೀ ಡಯಟ್‌ನ ಕಾರ್ಯವನ್ನಾಗಿ ನೋಡುವ ದೃಷ್ಠಿಕೋನವನ್ನು ಹೊಂದುವುದು ಅತೀ ಅವಶ್ಯಕವಾಗಿದೆ. ಇದರಿಂದ ವಿವಿಧ ವಿಭಾಗಗಳ ನಡುವೆ ಅರ್ಥಪೂರ್ಣ ಅಂತರ್‌ಕ್ರಿಯಾತ್ಮಕ ಸಂಬಂಧಗಳ ಜೊತೆಗೆ ಕೊಡು-ಕೊಳ್ಳುವಿಕೆಯ ಮೂಲಕ ಗುರಿ ಸಾಧನೆಗೆ ಪ್ರಯತ್ನಿಸಬೇಕು. ವಿಭಾಗಗಳ ನಡುವಿನ ಸಮನ್ವಯ ಸಾಧಿಸುವಲ್ಲಿ ಡಯಟ್ ಪ್ರಾಚಾರ್ಯರ ಪಾತ್ರ ಅತ್ಯಂತ ಪ್ರಮುಖವಾಗಿದೆ

**ಡಯಟ್‌ನ ವಿಭಾಗಗಳು**

1. ಜಿಲ್ಲಾ ಸಂಪನ್ಮೂಲ ಘಟಕ District Resource Unit (DRU)
2. ಸೇವಾ ಪೂರ್ವ ತರಬೇತಿ ವಿಭಾಗ Pre- Service Teacher Education (PSTE))
3. ಯೋಜನೆ ಮತ್ತು ನಿರ್ವಹಣೆ ಘಟಕ Planning and Management (P&M)
4. ಶೈಕ್ಷಣಿಕ ತಂತ್ರಜ್ಞಾನ ವಿಭಾಗ Educational Technology (ET)
5. ಸೇವಾ ನಿರತ ಶಿಕ್ಷಕರಿಗೆ ತರಬೇತಿ, ಕ್ಷೇತ್ರ ಪ್ರಕ್ರಿಯೆ ನಾವಿನ್ಯತೆ ಮತ್ತು ಸಮನ್ವಯ ಸಂಘಟನಾ ವಿಭಾಗ Inservice Programmes, Field Interaction and Innovation Co- ordination (IFIC)
6. ಪಠ್ಯಕ್ರಮ ಸಂಪನ್ಮೂಲ ನಿರ್ಮಾಣ ಮತ್ತು ಮೌಲ್ಯಮಾಪನ Curriculum, Material development and Evaluation (CMDE)
7. ಕಾರ್ಯಾನುಭವ ವಿಭಾಗ Work Experience (WE)

ತರಬೇತಿ, ಸಂಪನ್ಮೂಲಗಳ ಬಳಕೆ, ಸಂಶೋಧನೆ, ಮೇಲ್ವಿಚಾರಣೆ, ಮೌಲ್ಯಮಾಪನ ಮತ್ತು ಸಮನ್ವಯತೆ ಡಯಟ್‌ನ ಪ್ರಮುಖ ಕರ್ತವ್ಯಗಳಾಗಿದ್ದು, ಪ್ರತಿಯೊಂದು ವಿಭಾಗವು ತನ್ನದೇ ಆದಂತಹ ಗುರಿ/ಉದ್ದೇಶ ಕಾರ್ಯಕಲಾಪ ಹೊಂದಿದ್ದರೂ ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ **ಸೇವಾ ಪೂರ್ವ** ಮತ್ತು **ಸೇವಾ ನಿರತ ಶಿಕ್ಷಕರಿಗೆ** ಗುಣಮಟ್ಟದ ತರಬೇತಿ ನೀಡುವಲ್ಲಿ ಎಲ್ಲಾ ವಿಭಾಗಗಳು ಪರಸ್ಪರ ಅವಲಂಬಿತವಾಗಿದ್ದು, ತನ್ನದೇ ಆದ ಪಾತ್ರವನ್ನು ವಹಿಸುತ್ತವೆ. ಅವುಗಳನ್ನು ಈ ಕೆಳಗಿನಂತೆ ಹೇಳಬಹುದು.

**ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸುವ ದೃಷ್ಟಿಯಿಂದ ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರಿಗೆ ತರಬೇತಿ ನೀಡುವಲ್ಲಿ ಡಯಟ್ ಸಂಸ್ಥೆಯ ಎಲ್ಲ ವಿಭಾಗಗಳ ಪಾತ್ರ.**

1. ಸೇವಾ ಪೂರ್ವ ತರಬೇತಿಯಲ್ಲಿ ಡಿ.ಇಡಿ ಪ್ರಶಿಕ್ಷಣಾರ್ಥಿಗಳ ವ್ಯಕ್ತಿತ್ವ ವಿಕಸನಕ್ಕೆ ಸಂಬಂಧಿಸಿದಂತೆ ತರಬೇತಿ ನೀಡುವುದು, ಪ್ರಯೋಗಾಲಯ ಹಾಗೂ ಗ್ರಂಥಾಲಯ ನಿರ್ವಹಣಾ ಕಾರ್ಯದ ಬಗ್ಗೆ ಮಾರ್ಗದರ್ಶನ ನೀಡುವುದು, ಎನ್.ಎಸ್.ಎಸ್ ಹಾಗೂ ದೈಹಿಕ ಶಿಕ್ಷಣ ತರಬೇತಿ ಆಯೋಜಿಸುವುದು ಪಿ.ಎಸ್.ಟಿ.ಇ ವಿಭಾಗದ ಬಹಳ ಮುಖ್ಯ ಕಾರ್ಯವಾರೂ ಇತರ ವಿಭಾಗಳ ಸಹಕಾರ ಅಷ್ಟೇ ಪರಿಣಾಮಕಾರಿಯೆನಿಸುತ್ತದೆ. ಕಾರಣ ಸೇವಾ ಪೂರ್ವ ತರಬೇತಿಯ ಸಮಗ್ರ ಕಾರ್ಯಕ್ರಮ ಪಟ್ಟಿ ತಯಾರಿಸುವಲ್ಲಿ ಯೋಜನೆ ಮತ್ತು ನಿರ್ವಹಣೆ ವಿಭಾಗ ಬಹಳ ಮುಖ್ಯವಾದದ್ದು.
2. ಡಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಮತ್ತು ಸೇವಾ ನಿರತ ಶಿಕ್ಷಕರಿಗೆ ಸಮೂಹ ಮಾಧ್ಯಮದ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಪರಿಚಯ, ಬೋಧನೆ ಮತ್ತು ಕಲಿಕೆಯಲ್ಲಿ ತಂತ್ರಜ್ಞಾನ ಸಾಧನದ ಬಳಕೆ, ಕಲಿಕೋಪಕರಣಗಳ ತಯಾರಿಕೆ ಹಾಗೂ ಪ್ರಚಲಿತ ದೂರ ಶಿಕ್ಷಣ, ಎಜುಸ್ಯಾಟ್ ಕಾರ್ಯಕ್ರಮ, ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣ ನೀಡುವಲ್ಲಿ ಶೈಕ್ಷಣಿಕ ತಂತ್ರಜ್ಞಾನ ವಿಭಾಗ ಜವಾಬ್ದಾರಿಯನ್ನು ಹೊಂದಿದೆ.
3. ಸೇವಾನಿರತ ಶಿಕ್ಷಕರಿಗೆ ತರಬೇತಿಯ ಉಸ್ತುವಾರಿಯನ್ನು ಐ.ಎಫ್.ಐ.ಸಿ ವಿಭಾಗ ನೋಡಿಕೊಳ್ಳುತ್ತಿದ್ದರೂ ಇದರ ಸಂಪೂರ್ಣ ಯಶಸ್ಸು ಯೂಜನೆ ಮತ್ತು ನಿರ್ವಹಣೆ ವಿಭಾಗದ ಯೋಜನೆಯ ಮೇಲೆ ಅವಲಂಬಿತವಾಗಿದೆ. ಜಿಲ್ಲೆಯ ಎಲ್ಲ ಶಿಕ್ಷಕರ ಸಂಖ್ಯೆ, ಎಷ್ಟು ಶಿಕ್ಷಕರಿಗೆ ಯಾವ ತರಬೇತಿ ನೀಡಬೇಕು, ತರಬೇತಿಯ ಹಂತ, ಅವಧಿ

ಆಯವ್ಯಯ ಇವೆಲ್ಲವೂ ಯೋಜನೆ ಮತ್ತು ನಿರ್ವಹಣೆ ವಿಭಾಗ ಕೈಗೊಳುವ ಕ್ರಿಯಾಯೋಜನೆಯ ಮೇಲೆ ಅವಲಂಬಿತವಾಗಿದೆ. ಕ್ರಿಯಾ ಸಂಶೋಧನೆ ಹಾಗೂ ಪ್ರಯೋಗಾಲಯ ಕ್ಷೇತ್ರ ಚಟುವಟಿಕೆಗಳು ಮತ್ತು ಬಹು ಕೇಂದ್ರಿತ ಅಧ್ಯಯನಗಳ ಬಗ್ಗೆ ತರಬೇತಿಗಳು ಮತ್ತು ಮಾರ್ಗದರ್ಶನಗಳನ್ನು ನೀಡುವುದು ಹಾಗೂ ಅಧ್ಯಯನಗಳನ್ನು ನಡೆಸುವಂತೆ ಯೋಜನೆ ಮತ್ತು ನಿರ್ವಹಣೆ ವಿಭಾಗ ಉತ್ತೇಜಿಸುತ್ತದೆ.

4. ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಕರಿಗೆ ಕಾರ್ಯಾನುಭವ, ಎಲ್ಲಾ ಫಲಾನುಭವಿಗಳಲ್ಲಿ ವೃತ್ತಿ ಸಂಬಂಧಿತ ಹವ್ಯಾಸಗಳನ್ನು ಬೆಳೆಸುವುದು, ಸ್ಥಳೀಯ ಸಂಪನ್ಮೂಲ ಬಳಸಿ ಕಡಿಮೆ ವೆಚ್ಚದಲ್ಲಿ ಕಲಿಕಾ ಬೋಧನಾ ಸಾಮಗ್ರಿಗಳನ್ನು ತಯಾರಿಸುವುದು ಮತ್ತು ಇತರ ಎಲ್ಲಾ ಶಾಖೆಗಳಿಗೆ ಮಾಹಿತಿ ಪೂರೈಸುವುದು ಕಾರ್ಯಾನುಭವ ವಿಭಾಗದ ಕಾರ್ಯವಾಗಿದೆ.

5. ಸೇವಾ ಪೂರ್ವ ಮತ್ತು ಸೇವಾನಿರತ ಶಿಕ್ಷಕರಿಗೆ ತರಬೇತಿಯ ಶೈಕ್ಷಣಿಕ ಮೌಲ್ಯಮಾಪನದ ಪರಿಕಲ್ಪನೆ, ಪಠ್ಯಕ್ರಮ – ವಿದ್ಯಾರ್ಥಿ, ಶಿಕ್ಷಕ, ಶೈಕ್ಷಣಿಕ ಪರಿಸರದ ಆಧಾರದ ಮೇಲೆ ಪಠ್ಯಕ್ರಮ ರಚಿಸುವ ವಿಧಿ, ತರಬೇತಿ ಸಾಹಿತ್ಯ ರಚನೆ, ಮಾಡ್ಯುಲ್ ತಯಾರಿಕೆ ಇವೆಲ್ಲವೂ ಪಠ್ಯವಸ್ತು ಅಭಿವೃದ್ಧಿ ಮತ್ತು ಮೌಲ್ಯಮಾಪನ ವಿಭಾಗ ನೋಡಿಕೊಳ್ಳುತ್ತದೆ.

6. ತರಬೇತಿಗೆ ಸಂಬಂಧಿಸಿದ ಅಂಕಿ ಅಂಶ, ಸಂಪನ್ಮೂಲ ವ್ಯಕ್ತಿಗಳು ಹಾಗೂ ಜಿಲ್ಲಾ ಸಂಪನ್ಮೂಲ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವ, ಎಲ್ಲಾ ವಿಭಾಗದ ಯೋಜನೆ, ಕಾರ್ಯಾಚರಣೆ ಅವಲೋಕಿಸಿ ಮಾರ್ಗದರ್ಶನ ನೀಡುವುದನ್ನು ಜಿಲ್ಲಾ ಸಂಪನ್ಮೂಲ ವಿಭಾಗ ನೋಡಿಕೊಳ್ಳುತ್ತದೆ.

ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಅಭಿವೃದ್ಧಿಯನ್ನು ಸಾಧಿಸುವಲ್ಲಿ ಡಯಟ್‌ನ ಎಲ್ಲಾ ವಿಭಾಗಗಳು ಪರಸ್ಪರ ಸಮನ್ವಯತೆ ಪ್ರಾಮುಖ್ಯವಾದದ್ದು. ಎಲ್ಲಾ ವಿಭಾಗದ ಅಧಿಕಾರಿಗಳು/ಹಿರಿಯ ಉಪನ್ಯಾಸಕರು, ಉಪನ್ಯಾಸಕರು ಸೇವಾ ಪೂರ್ವ ತರಬೇತಿಯ ಬೋಧನೆ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡಲ್ಲಿ ಡಿ.ಇಡಿ ಪ್ರಶಿಕ್ಷಣಾರ್ಥಿಗಳಿಗೆ ಉತ್ತಮ ತರಬೇತಿ ದೊರಕುವಲ್ಲಿ ಸಂಶಯವಿಲ್ಲ. ಕಾರಣ ಆಯಾ ವಿಭಾಗದ ಅನುಭವ ಮಕ್ಕಳ ಸರ್ವತೋಮುಖ ವ್ಯಕ್ತಿತ್ವ ವಿಕಸನಕ್ಕೆ ಮಾರ್ಗವಾಗುತ್ತದೆ. ಹಾಗೆಯೇ, ಸೇವಾ ನಿರತ ಶಿಕ್ಷಕರ ತರಬೇತಿಯಲ್ಲೂ ಎಲ್ಲಾ ವಿಭಾಗದ ಅಧಿಕಾರಿಗಳು/ಉಪನ್ಯಾಸಕರು ತರಬೇತಿಯ ಉಸ್ತುವಾರಿ, ಮೌಲ್ಯಮಾಪನ, ಅನುಪಾಲನೆ ಮಾಡುವುದು ಅಗತ್ಯವೂ ಆಗಿರುತ್ತದೆ.

ಗೋಪಿನಾಥ ಕಲಭಾಗ

ಉಪನ್ಯಾಸಕರು
ಡಯಟ್, ಮಂಗಳೂರು

**11. ಶಿಕ್ಷಕರ ವಿವಿಧ ಅವಶ್ಯಕತೆಗಳನ್ನು ಗುರುತಿಸುವಂತಹ ಚಟುವಟಿಕೆ/ಅಧ್ಯಯನಗಳು ಡಯಟ್‌ನ ವಿವಿಧ ವಿಭಾಗಗಳನ್ನು ಪ್ರತ್ಯೇಕಿಸುತ್ತವೆ ಹಾಗೂ ಪ್ರತಿಯೊಂದು ವಿಭಾಗಗಳು ಇಂತಹ ಅಧ್ಯಯನ/ಚಟುವಟಿಕೆ ಎಷ್ಟರ ಮಟ್ಟಿಗೆ ತಮ್ಮ ಕೊಡುಗೆಗಳನ್ನು ನೀಡಬಲ್ಲವು?**

**ವಿವರ** : ಶಿಕ್ಷಕರ ಅವಶ್ಯಕತೆಗಳಗನುಗುಣವಾಗಿ ತರಬೇತಿ, ಸಂಪನ್ಮೂಲವನ್ನು ನೀಡಿ ತನ್ಮೂಲಕ ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಡಯಟ್ ಸಂಸ್ಥೆಯ ಆದ್ಯ ಕರ್ತವ್ಯ. ಈ ಹಿನ್ನೆಲೆಯಲ್ಲಿ ಡಯಟ್ ಸಂಸ್ಥೆಯ ಏಳೂ ವಿಭಾಗಗಳು ತಮ್ಮದೇ ಆದಂತಹ ಪಾತ್ರವನ್ನು ವಹಿಸುತ್ತವೆ.

ಬೋಧನಾ ಕ್ರಮ, ವಿಷಯದ ಬಗ್ಗೆ ಪ್ರೌಢಿಮೆ, ಕಲಿಕೋಪಕರಣ ತಯಾರಿ, ಬೋಧನೆಯಲ್ಲಿ ಕಲಿಕೋಪಕರಣಗಳ ಬಳಕೆ, ಕಂಪ್ಯೂಟರ್ ಬಳಸಿ ಕಂಪ್ಯೂಟರ್ ಆಧಾರಿತ ಶಿಕ್ಷಣ, ದೂರಶಿಕ್ಷಣದ ಬಗ್ಗೆ ಸ್ಪಷ್ಟ ಪರಿಕಲ್ಪನೆ, ಪರಿಹಾರ ಬೋಧನೆ, ಕ್ರಿಯಾ ಸಂಶೋಧನೆ ಕೈಗೊಳ್ಳುವುದು ಇವೇ ಮೊದಲಾದವು ಶಿಕ್ಷಕರ ಅವಶ್ಯಕತೆಗಳಾಗಿದ್ದು, ಡಯಟ್ ಸಂಸ್ಥೆಯ ಎಲ್ಲಾ ಏಳೂ ವಿಭಾಗಗಳು ಶಿಕ್ಷಕರ ಈ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಿದೆ. ಏಳೂ ವಿಭಾಗಗಳ ಕಾರ್ಯಗಳನ್ನು ಅವಲೋಕಿಸುತ್ತಾ ಅವುಗಳ ಕೊಡುಗೆಗಳನ್ನು ಅರ್ಥೈಸಿಕೊಳ್ಳಬಹುದು.

| | |
|---|---|
| ಸೇವಾ ಪೂರ್ವ ಶಿಕ್ಷಕರ ತರಬೇತಿ ವಿಭಾಗ (PSTE) | ○ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸಿದ ಹಾಗೆ ಹೊಸ ಬೋಧನಾ ವಿಧಾನಗಳನ್ನು ಹಾಗೂ ವಿನ್ಯಾಸಗಳನ್ನು ನಿರೂಪಿಸುವುದು (ಬಹುತರಗತಿಗಳ ಬೋಧನೆ ,ಚಿಕ್ಕ ಗುಂಪುಗಳ ಬೋಧನೆ ಹಾಗೂ ಅನೌಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದ ಬೋಧನೆ ವಿಧಾನಗಳು)<br>○ ವ್ಯಕ್ತಿಯ ವಿಕಾಸಕ್ಕೆ ಅನುಗುಣವಾಗುವ ಮೌಲ್ಯ ಶಿಕ್ಷಣ, ಸಾಂಸ್ಕೃತಿಕ ಶಿಕ್ಷಣ ಇವುಗಳನ್ನು ಉತ್ತೇಜನಗೊಳಿಸುವ ಬಗ್ಗೆ ತರಬೇತಿ ನೀಡುವುದು.<br>○ ಅನೌಪಚಾರಿಕ ಶಿಕ್ಷಣ ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರಿಯಾದ ಮನೋವೈಜ್ಞಾನಿಕ ಮಾರ್ಗದರ್ಶನಗಳನ್ನು ನೀಡುವುದು.<br>○ ಹೊಸ ಹೊಸ ಬೋಧನಾ ತಂತ್ರಗಳು ಹಾಗೂ ಇವುಗಳಿಗೆ ಸಂಬಂಧಿಸಿದ ಪಾಠೋಪಕರಣಗಳನ್ನು ತಯಾರಿಸುವುದು.<br>○ ಸ್ಥಳೀಯ ಅವಶ್ಯಕತೆಗಳಿಗೆ ಅನುಗುಣವಾದ ಪಠ್ಯ ಹಾಗೂ ಬೋಧನೆ ಮತ್ತು ಕಲಿಕಾ ಉಪಕರಣಗಳ ತಯಾರಿಕೆ ಕಡಿಮೆ ವೆಚ್ಚದ ಬೋಧನೋಪಕರಣಗಳ ತಯಾರಿಕೆ ಹಾಗೂ ಪರೀಕ್ಷಣ ಮತ್ತು ಮೌಲ್ಯಮಾಪನಕ್ಕೆ ಸಂಬಂಧಿಸಿದ ಸಾಧನ ಹಾಗೂ ತಂತ್ರಗಳ ತಯಾರಿಕೆ.<br>○ ವಿಜ್ಞಾನ, ಮನೋವಿಜ್ಞಾನ ಸಂಪನ್ಮೂಲ ಕಟ್ಟಡ, ಅಂಗವಿಕಲ ಮಕ್ಕಳ ಕೊಠಡಿ, ಕಲಾ ಶಿಕ್ಷಣ ಕ್ರೀಡೆ ಹಾಗೂ ದೈಹಿಕ ಶಿಕ್ಷಣ ಇವುಗಳಿಗೆ ಸಂಬಂಧಿಸಿದ ಪ್ರಯೋಗಾಲಯಗಳ ನಿರ್ವಹಣೆ. |

| | |
|---|---|
| ಜಿಲ್ಲಾ ಸಂಪನ್ಮೂಲ ವಿಭಾಗ (DRU) (ಅನೌಪಚಾರಿಕ ಶಿಕ್ಷಣ ಮತ್ತು ವಯಸ್ಕರ ಶಿಕ್ಷಣ) | ○ ವಯಸ್ಕರ ಶಿಕ್ಷಣ ಹಾಗೂ ಅನೌಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ರೂಪಿಸುವುದು. ಮತ್ತು ಅನುಷ್ಠಾನಗೊಳಿಸುವುದು.<br>○ ಮುಂದುವರಿಕೆ ಶಿಕ್ಷಣದ ಬೋಧಕರಿಗೆ ಹಾಗೂ ಮೇಲ್ವಿಚಾರಕರಿಗೆ ಕಾರ್ಯಕ್ರಮಗಳನ್ನು ರೂಪಿಸುವುದು. ಹಾಗೂ ಈ ಬಗೆಯ ಕಾರ್ಯಕ್ರಮಗಳು ಡಯಟ್‌ನ ಹೊರಗಡೆ ನಡೆದಾಗಲೂ ಮಾರ್ಗದರ್ಶನ ನೀಡುವುದು ಹಾಗೂ ಇತರೆ ಸಂಸ್ಥೆಗಳೊಂದಿಗೆ ಸಹಕರಿಸುವುದು.<br>○ ಅನೌಪಚಾರಿಕ ಶಿಕ್ಷಣ ವಯಸ್ಕರ ಶಿಕ್ಷಣದ ಯೋಜನೆಗಳಲ್ಲಿ ಕೆಲಸ ನಿರ್ವಹಿಸುವುದು.<br>○ ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಡಿಮೆ ವೆಚ್ಚದ ಬೋಧನಾ ಉಪಕರಣಗಳ ತಯಾರಿಕೆ ಹಾಗೂ ಇತರೆ ವಿಭಾಗಗಳೊಂದಿಗೆ ನವ ಸಾಕ್ಷರಸ್ಥರಿಗೆ ಪಠ್ಯ ಪುಸ್ತಕಗಳ ತಯಾರಿಕೆ. |
| ಕಾರ್ಯಾನುಭವ ವಿಭಾಗ (WE) | ○ ಪ್ರಾಥಮಿಕ ಮತ್ತು ಅನೌಪಚಾರಿಕ ಹಾಗೂ ವಯಸ್ಕರ ಶಿಕ್ಷಣ ಕೇಂದ್ರಗಳಿಗೆ ಕಾರ್ಯಾನುಭವಕ್ಕೆ ಸಂಬಂಧಿಸಿದ ಪಠ್ಯ ವಸ್ತುವಿನ ಪರಿಷ್ಕರಣ ಮತ್ತು ವಿಮರ್ಶೆ.<br>○ ಸಾಮಾಜಿಕ ಉಪಯುಕ್ತ ಉತ್ಪಾದನಾ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು.<br>○ ಕಲೆ, ಸೃಜನಶೀಲ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಕಾರ್ಯಕ್ರಮಗಳನ್ನು ರೂಪಿಸುವುದು.<br>○ ಶುಚಿತ್ವ, ಪರಿಸರ ಸಂರಕ್ಷಣೆ ಹಾಗೂ ಸಂಸ್ಥೆಯ ಸುತ್ತಮುತ್ತಲಿನ ನೈರ್ಮಲ್ಯ ಕಾಪಾಡುವುದು. ಹಾಗೂ ಸಂಸ್ಥೆಯ ಪಿಠೋಪಕರಣ ಹಾಗೂ ಇತರೆ ಸ್ವತ್ತುಗಳ ರಕ್ಷಣೆ ಹಾಗೂ ಶುಚಿತ್ವವನ್ನು ಕಾಪಾಡಿಕೊಳ್ಳುವುದು.<br>○ ಸ್ಥಳೀಯ ಸಂಪನ್ಮೂಲಗಳನ್ನು ಬಳಸಿಕೊಂಡು ಕಾರ್ಯಾನುಭವದ ತರಬೇತಿ ನೀಡುವುದು.<br>○ ಸೇವಾಪೂರ್ವ ನಿರತ ಶಿಕ್ಷಕರುಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.<br>○ ವೃತ್ತಿ ನಿರತ ಕಾರ್ಯಕ್ಷೇತ್ರಗಳಿಗೆ ಭೇಟಿ ಹಾಗೂ ಅವುಗಳ ಬಗ್ಗೆ ಕಾರ್ಯಯೋಜನೆ ರೂಪಿಸುವುದು.<br>○ ಕಾರ್ಯಾನುಭವ ಹವ್ಯಾಸ ಕಾರ್ಯಕ್ರಮಗಳನ್ನು ಸಂಯೋಜಿಸುವುದು.<br>○ ಮಕ್ಕಳಿಗೆ ಕಾರ್ಯಾನುಭವದೊಂದಿಗೆ ಕಲಿಕೆಯ ಸುಲಭತೆಯ ಬಗ್ಗೆ ಮಕ್ಕಳ ಮೇಳವನ್ನು ಏರ್ಪಡಿಸುವುದು.<br>○ ಬೋಧನಾ ಉಪಕರಣಗಳ ತಯಾರಿಕೆ, ಮೌಲ್ಯಮಾಪನ ಸಾಧನಗಳ ತಯಾರಿಕೆ ಕಾರ್ಯಾಗಾರಗಳನ್ನು ಏರ್ಪಡಿಸುವುದು.<br>○ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಭಾಷಣ ಸ್ಪರ್ದೆ, ಆಟೋಟ ಸ್ಪರ್ದೆ, ಹಾಡುಗಾರಿಕೆ, ಅಭಿನಯ, ನಾಟಕ ಇತ್ಯಾದಿ ಸ್ಪರ್ಧೆಗಳನ್ನು ಏರ್ಪಡಿಸುವುದು. |

| | |
|---|---|
| ಸೇವಾ ನಿರತ ತರಬೇತಿ ಕ್ಷೇತ್ರ ಪ್ರಕ್ರಿಯೆ ಹಾಗೂ ನಾವಿನ್ಯತೆ ಹಾಗೂ ಸಂಘಟಣೆ ವಿಭಾಗ **(IFIC)** | ○ ಸೇವಾ ನಿರತ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಪುನಶ್ಚೇತನ ತರಬೇತಿ ಕಾರ್ಯಕ್ರಮಗಳನ್ನು ಸಂಯೋಜಿಸುವುದು.<br>○ ಅಗತ್ಯತೆಗೆ ಅನುಗುಣವಾಗಿ ಹಾಗೂ ವಿಷಯಾಧಾರಿತ ತರಬೇತಿ ಕಾರ್ಯಕ್ರಮಗಳನ್ನು ಸಂಯೋಜಿಸುವುದು.<br>○ ಗುಣಾತ್ಮಕ ಹಾಗೂ ಪರಿಣಾಮಕಾರಿಯಾದ ತರಬೇತಿ ಕಾರ್ಯಕ್ರಮಗಳನ್ನು ಡಯಟ್‌ನ ಹೊರಭಾಗದಲ್ಲಿ ಹಮ್ಮಿಕೊಳ್ಳುವುದು.<br>○ ಕ್ಷೇತ್ರ ಕಾರ್ಯದ ಸಂಘಟನೆ ಹಾಗೂ ವಿಸ್ತರಣಾ ಕಾರ್ಯಕ್ರಮಗಳನ್ನು ರೂಪಿಸುವುದು.<br>○ ಶಿಕ್ಷಣದಲ್ಲಿ ಹೊಸ ಆವಿಷ್ಕಾರಗಳಿಗೆ ಸಂಶೋಧನೆಗಳಿಗೆ ನಾವಿನ್ಯತೆಗಳಿಗೆ ಪ್ರೋತ್ಸಾಹ ನೀಡುವುದು.<br>○ ವಾರ್ತಾ ಪತ್ರ, ಶಿಕ್ಷಣ ಮಾಹಿತಿ (ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಹಾಗೂ ಅನೌಪಚಾರಿಕ ಶಿಕ್ಷಣಕ್ಕೆ ಸಂಬಂಧಿಸಿದಂತೆ ಮತ್ತು ವಯಸ್ಕರ ಶಿಕ್ಷಣಕ್ಕೆ ಸಂಬಂಧಿಸಿದಂತೆ)<br>○ ಯೋಗ ಮತ್ತು ಮೌಲ್ಯಶಿಕ್ಷಣ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು ಇವುಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಹೊರತರುವುದು. |
| ಪಠ್ಯಕ್ರಮ ಸಾಮಗ್ರಿಗಳ ಅಭಿವೃದ್ಧಿ ಮತ್ತು ಮೌಲ್ಯಮಾಪನ ವಿಭಾಗ **(CMDE)** | ○ ಪ್ರಾಥಮಿಕ ಶಿಕ್ಷಣ ಮತ್ತು ಶಿಕ್ಷಕರ ತರಬೇತಿ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯಕ್ರಮಗಳಿಗೆ ಅನುಗುಣವಾದ ಪಠ್ಯವಸ್ತುವಿನ ತಯಾರಿಕೆ.<br>○ ಒಂದು ಮತ್ತು ಎರಡನೇ ತರಗತಿಗಳಿಗೆ ಅನುಕೂಲವಾಗುವ ರೀತಿಯಲ್ಲಿ ವಾಚನಾಭಿರುಚಿಯ ಪುಸ್ತಕಗಳ ತಯಾರಿಕೆ ಮತ್ತು ಶಿಕ್ಷಕರ ಮಾರ್ಗದರ್ಶಿಗಳನ್ನು ತಯಾರಿಸುವುದು.<br>○ ಪರೀಕ್ಷಣಗಳು(ಟೆಸ್ಟ)ಪ್ರಶ್ನಾವಳಿಗಳು.ಪ್ರಶ್ನೆಬಂಢಾರ, ತುಲನೆಮಾಪನ, ವೀಕ್ಷಣೆಯ ನಮೂನೆಗಳು ಪರ್ಯಾನ ಬೋಧನೆಗೆ ಸಂಬಂಧಿಸಿದ ಮಾರ್ಗದರ್ಶಿಗಳು ಮತ್ತು ಪರಿಹಾರ ಬೋಧನೆಗೆ ಸಂಬಂಧಿಸಿದ ಹಾಗೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಹಾಗೂ ಪ್ರತಿಭಾನ್ವಿತರನ್ನು ಗುರುತು ಹಚ್ಚುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>○ ಆನೌಪಚಾರಿಕ ಹಾಗೂ ವಯಸ್ಕರ ಶಿಕ್ಷಣ<br>○ ಕನಿಷ್ಠ ಕಲಿಕಾ ಹಂತದ ಯೋಜನೆಯ ಉಸ್ತುವಾರಿ ಮತ್ತು ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>○ ಜಿಲ್ಲಾ ಶಿಕ್ಷಣದ ಯೋಜನೆಯ ಅನುಷ್ಠಾನದ ಉಸ್ತುವಾರಿ ಮತ್ತು ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.<br>○ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆದಡಿಯಲ್ಲಿ ಪ್ರಾ.1 ರಿಂದ 4 ನೇ ತರಗತಿಯವರೆಗಿನ ಮಕ್ಕಳ ಓದುವ ಸಾಮರ್ಥ್ಯದ ಸಾಧನೆಯನ್ನು ನಿರ್ಧರಿಸುವ ಪರೀಕ್ಷೆಗಳನ್ನು ನಡೆಸುವುದು.<br>○ ಸೇವಾನಿರತ ಶಿಕ್ಷಕರಿಗೆ ತರಬೇತಿಗೆ ಸಂಬಂಧಿಸಿದ ಸಾಹಿತ್ಯ ರಚನೆ.<br>○ ಸೇವಾಪೂರ್ವ, ಸೇವಾನಿರತ ಹಾಗೂ ವಯಸ್ಕರ ಶಿಕ್ಷಣ, ಅನೌಪಚಾರಿಕ ಶಿಕ್ಷಣದ ಶಿಕ್ಷಕರಿಗೆ ತರಬೇತಿ ನೀಡುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು. ಕ್ಷೇತ್ರಾಧ್ಯಯನ, ಕ್ಷೇತ್ರ |

| | |
|---|---|
| | ಪ್ರಕ್ರಿಯೆ ಹಾಗೂ ಇನ್ನಿತರ ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದು. |
| ಶೈಕ್ಷಣಿಕ ತಂತ್ರಜ್ಞಾನ ವಿಭಾಗ **(E.T)** | ○ ಪ್ರಾಥಮಿಕ ಶಿಕ್ಷಣಕ್ಕೆ ಸಂಬಂಧಿಸದಂತೆ ಪರಿಣಾಮಕಾರಿಯಾಗಿ ಹಾಗೂ ಸುಲಭ ಬೆಲೆಯ ಪಾಠೋಪಕರಣಗಳ ತಯಾರಿಕೆ.<br>○ ಶಿಕ್ಷಣದಲ್ಲಿ ತಂತ್ರಜ್ಞಾನದ ಬಳಕೆಯ ಬಗ್ಗೆ ಶಿಕ್ಷಕರಿಗೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸುವುದು.<br>○ ಆಡಿಯೋ, ವಿಡಿಯೋ ಕ್ಯಾಸೆಟ್, ಚಲನಚಿತ್ರ ಮುಂತಾದವುಗಳ ಸಂಗ್ರಹಣೆ ಹಾಗೂ ಇವುಗಳ ಬಳಕೆಯ ಬಗ್ಗೆ ತರಬೇತಿ.<br>○ ಶಾಲೆಗಳಿಗೆ ಆಡಿಯೋ, ವಿಡಿಯೋ ಸ್ಲೈಡ್ಸ್ ಚಲನಚಿತ್ರ ಎರವಲು ನೀಡುವುದು.<br>○ ದೃಕ್ ಮತ್ತು ಶ್ರವಣ ಕ್ಯಾಸೆಟಗಳ ತಯಾರಿಕೆ, ಧ್ವನಿಸುರುಳಿ ತಯಾರಿಕೆ, ಭಾಷಾ ವಿಷಯಗಳಿಗೆ ಸಂಬಂಧಿಸಿದ ಕವಿತೆ, ಹಾಡು, ಕಥೆ ಇವುಗಳಿಗೆ ಸಂಬಂಧಿಸಿದ ಕ್ಯಾಸೆಟಗಳ ತಯಾರಿಕೆ.<br>○ ಹೊಸದಾಗಿ ಕಲಿಯುವವರಿಗೆ ಅನುಗುಣವಾಗಿ ಕಲಿಕಾ ಸಾಮಗ್ರಿಗಳ (ಕ್ಯಾಸೆಟ್) ತಯಾರಿಕೆ. |
| ಯೋಜನೆ ಮತ್ತು ಕಾರ್ಯ ನಿರ್ವಹಣೆ ವಿಭಾಗ (Planning and Management) | ○ ಶಾಲಾ ಸಂಕೀರ್ಣ, ಸಂಸ್ಥಾ ಮೌಲ್ಯಮಾಪನ ಮೊದಲಾದ ಕಾರ್ಯಕ್ರಮಗಳ ನಿರೂಪಣೆ ಮತ್ತು ನಿರ್ವಹಣೆ.<br>○ ಸಮುದಾಯ ಯುವಕ ಯುವತಿಯ ಮಂಡಲಿಗಳಲ್ಲಿ ಕೆಲಸ ನಿರ್ವಹಿಸುವವರಿಗೆ ತರಬೇತಿ ಕಾರ್ಯಕ್ರಮಗಳ ಯೋಜನೆ ರೂಪಿಸುವುದು.<br>○ ಶಿಕ್ಷಣದ ಯೋಜನಾಕಾರರಿಗೆ, ಆಡಳಿತಗಾರರಿಗೆ, ಜಿಲ್ಲಾ ಶಿಕ್ಷಣ ಮಂಡಳಿಗಳಿಗೆ ಹಾಗೂ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ ಯೋಜನೆ ರೊಪಿಸುವವರಿಗೆ ಮತ್ತು ರಾಷ್ಟ್ರೀಯ ಸಾಕ್ಷರತಾ ಮಿಷನುವರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳ ಅನುಷ್ಠಾನದ ಬಗ್ಗೆ ಕೆಲವೊಂದು ಅಧ್ಯಯನಗಳನ್ನು ನಡೆಸಿ ಮಾರ್ಗೋಪಾಯಗಳ್ನನು ರೂಪಿಸುವುದು ಮತ್ತು ಸೂಚಿಸುವುದು.<br>○ ಮೂಲ ಶಿಕ್ಷಣದ ಪರಿಕಲ್ಪನೆಗೆ ಅನುಗುಣವಾಗಿ ಸಮುದಾಯವನ್ನು ಶಿಕ್ಷಣದಲ್ಲಿ ಭಾಗವಹಿಸುವಂತೆ ಪ್ರೇರೆಪಿಸುವುದು.<br>○ ಶಾಲೆಗಳ ಮುಖ್ಯೋಪಾಧ್ಯಾಯರಿಗೆ, ಶಾಲಾ ಸಂಕೀರ್ಣದ ಮುಖ್ಯಸ್ಥರಿಗೆ, ಬ್ಲಾಕ ಹಂತದ ಶೈಕ್ಷಣಿಕ ಕಾರ್ಯಕರ್ತರಿಗೆ ತರಬೇತಿ ಕಾರ್ಯಕ್ರಮಗಳನ್ನು ರೂಪಿಸಿವುದರ ಮೂಲಕ ಅವರಿಗೆ ಮುಖಂಡತ್ವ ಪ್ರೇರೆಪಣೆ ಸಮುದಾಯದೊಂದಿಗೆ ಸಹಕರಿಸುವುದು. ಶೈಕ್ಷಣಿಕ, ಆಡಳಿತ, ಆರ್ಥಿಕ ಮತ್ತು ಕಛೇರಿಯ ನಡವಳಿಕೆಗಳ ಯೋಜನೆಗಳನ್ನು ರೂಪಿಸುವದು. (ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣ) ಸಂಸ್ಥಾ ಯೋಜನೆಗಳನ್ನು ತಯಾರಿಸುವ ಬಗ್ಗೆ ತರಬೇತಿ ನೀಡುವುದು. |

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**3. ಸರಕಾರಿ ಸ್ವಾಮ್ಯದಲ್ಲಿರುವ ತರಬೇತಿ ಸಂಸ್ಥೆಗೆ ಭೇಟಿ ನೀಡಿ ಅಲ್ಲಿನ ಅನುಭವದ ಆಧಾರದ ಮೇಲೆ ನಮ್ಮ ಸಂಸ್ಥೆಯಲ್ಲಿರುವ ಗುಣಾವಗುಣಗಳ ವಿಶ್ಲೇಷಣೆ :**

ನಮ್ಮ ವ್ಯಾಪ್ತಿಯಲ್ಲಿ ಒಟ್ಟು 12 ಡಿ.ಇಡಿ ಸಂಸ್ಥೆಗಳಿದ್ದು, ಅವುಗಳಲ್ಲಿ 11 ಖಾಸಗಿ ಮತ್ತು 1 ಸರಕಾರಿ ಸಂಸ್ಥೆಯಾಗಿವೆ.

ನಾನು ಭೇಟಿ ನೀಡಿದ ಖಾಸಗಿ ಸಂಸ್ಥೆ(ಸಹ್ಯಾದ್ರಿ ಶಿಕ್ಷಕ ಶಿಕ್ಷಣ ಸಂಸ್ಥೆ ಕಪಿತಾನಿಯೋ, ಮಂಗಳೂರು (ಭೇಟಿ ನೀಡಿದ ದಿನಾಂಕ : 11-07-2008 ಪೂರ್ವಾಹ್ನ)

ನಮ್ಮ ಸಂಸ್ಥೆಗೆ ಹೋಲಿಕೆ ಮಾಡಿ ಕಂಡುಬಂದ ಅಂಶಗಳು :

1. ಈ ಡಿ.ಇಡಿ ಸಂಸ್ಥೆಗೆ ಹೋಲಿಸಿದಾದ ಡಯಟ್ ಸಂಸ್ಥೆ ಉತ್ತಮವಾದ ಕಟ್ಟಡ ವ್ಯವಸ್ಥೆ ಹೊಂದಿದೆ. ವಿಶಾಲವಾದ ಕಾಂಪೌಂಡ್ ವ್ಯವಸ್ಥೆ ಹೊಂದಿದೆ.
2. ಸಹ್ಯಾದ್ರಿ ಡಿ.ಇಡಿ ಸಂಸ್ಥೆಯು ಅನುದಾನರಹಿತ ವಿದ್ಯಾಸಂಸ್ಥೆಯಾಗಿದ್ದರೂ ಉತ್ತಮ ವ್ಯವಸ್ಥೆಯನ್ನು ಹೊಂದಿದೆ. ಪ್ರಶಿಕ್ಷಕರು/ಅಧೀಕ್ಷಕರು ವಾರ್ಷಿಕ ಯೋಜನೆಯನ್ನು ತಯಾರಿಸಿ ಪಠ್ಯಕ್ರಮ ನಡೆಯುತ್ತಿದೆ.
3. ತರಗತಿ ಕೊಠಡಿ, ವಿಜ್ಞಾನ ಲ್ಯಾಬ್, ರೀಡಿಂಗ್ ರೂಂ, ವಾಚನಾಲಯ ಪ್ರಾಂಶುಪಾಲರ ಕೊಠಡಿ, ಕಂಪ್ಯೂಟರ್ ಕೊಠಡಿ ಇತ್ಯಾದಿಗಳು ಉತ್ತಮವಾಗಿದ್ದು, ಸ್ವಚ್ಛತೆಯನ್ನು ಕಾಪಾಡಿರುತ್ತಾರೆ. ಹಾಗೂ ಪ್ರತಿಯೊಂದಕ್ಕೂ ವಿದ್ಯಾಸಂಸ್ಥೆಗೆ ಪೂರಕವಾದ ಹೆಸರಿನ್ನಿಟ್ಟು ಹೆಚ್ಚು ಆಕರ್ಷಿತವಾಗಿದೆ. ಉದಾ : ಮನನ, ರಚನಾ, ಮಂಥನ, ಸ್ಪಂದನ, ನಂದನ, ಚೇತನ, ಚಿರಂತನ, ಅನ್ವೇಷಣಾ, ದರ್ಪಣ, ಧಾರಣ, ಸ್ಮರಣ, ಸುಮೇರು, ನಿರಾಳ ಇತ್ಯಾದಿ.
4. ಅಧೀಕ್ಷಕರು ಹಾಗೂ ಪ್ರಶಿಕ್ಷಕರು ಹೆಚ್ಚು ಕ್ರಿಯಾಶೀಲರಾಗಿದ್ದು, ವೇಳಾಪಟ್ಟಿಯಂತೆ ಎಲ್ಲಾ ಕಾರ್ಯಗಳು ನಡೆಯುತ್ತಿವೆ.
5. ಉತ್ತಮ ಗುಣಮಟ್ಟದ ಸೇವಾ ಪೂರ್ವ ತರಬೇತಿಗಾಗಿ ವಿದ್ಯಾರ್ಥಿ ಶಿಕ್ಷಕರಲ್ಲಿ ಉತ್ತಮ ಶಿಸ್ತು, ಮೌಲ್ಯಗಳು ಕಂಡುಬರುತ್ತವೆ ಹಾಗೂ ಸಂಸ್ಥೆಯ ಸಕಲ ಬೋಧನ ಸಂಪನ್ಮೂಲ ಬಳಕೆಯಾಗುತ್ತಿರುವುದು ಕಂಡುಬರುತ್ತಿದೆ.
6. ವಿಧ್ಯಾರ್ಥಿ ಶಿಕ್ಷಕರಲ್ಲಿ ಕ್ರಿಯಾಶೀಲತೆ ಎದ್ದು ಕಾಣುತ್ತದೆ.
7. ನಮ್ಮ ಡಯಟ್ ಸಂಸ್ಥೆಗೆ ಹೋಲಿಸಿದಾಗ ಸಹ್ಯಾದ್ರಿ ಡಿ.ಇಡಿ ಸಂಸ್ಥೆಯಲ್ಲಿ ಸೇವಾ ಪೂರ್ವ ತರಬೇತಿಗೆ ಒಟ್ಟು 9 ಪ್ರಶಿಕ್ಷಕರು ಸೇವೆಯನ್ನು ಸಲ್ಲಿಸುತ್ತಿದ್ದು, ಮಕ್ಕಳಿಗೆ ಪಾಠ ಬೋಧನೆ ವೇಳಾಪಟ್ಟಿಯಂತೆ ನಡೆಯುತ್ತಿದೆ. ಆದರೆ ಡಯಟ್ ಸಂಸ್ಥೆಯಲ್ಲಿ ಕಳೆದ 5-6 ವರ್ಷಗಳಿಂದ ಉಪನ್ಯಾಸಕರ ತೀವ್ರ ಕೊರತೆಯಿರುವುದರಿಂದ ಸೇವಾ ಪೂರ್ವ ತರಬೇತಿಗೆ ಸ್ವಲ್ಪ ಅಡಚಣೆಯುಂಟಾಗುತ್ತಿರುವುದು ಸತ್ಯ ಹಾಗೂ ವಾರ್ಷಿಕ ಯೋಜನೆಯಂತೆ ಪಠ್ಯಕ್ರಮ ಮುನ್ನಡೆಸಲು ಸಮಸ್ಯೆ ಎದುರಾಗುತ್ತಿದೆ. ಇಂತಹ ಸಮಸ್ಯೆ ಅಲ್ಲಿ ಕಂಡು ಬರುತ್ತಿಲ್ಲ.
8. ಆದರೆ ಡಯಟ್ ಸಂಸ್ಥೆಯಲ್ಲಿ ಬೇರೆ ಬೇರೆ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಹಿರಿಯ ಉಪನ್ಯಾಸಕರು, ಉಪನ್ಯಾಸಕರ ಅನುಭವ ವಿದ್ಯಾರ್ಥಿಗಳಿಗೆ ಸಿಗುತ್ತಿರುವುದು ನಿಜಕ್ಕೂ ಸ್ವಾಗತಾರ್ಹ.
9. ಕೆಲವೇ ಕೆಲವು ಉಪನ್ಯಾಸಕರಿದ್ದರೂ ಮಕ್ಕಳಲ್ಲಿ ಪಠ್ಯ ಮತ್ತು ಪಠ್ಯ ಪೂರಕ ಚಟುವಟಿಕೆಗಳು ಎಂದಿನಂತೆ ಡಯಟ್ ಸಂಸ್ಥೆಯಲ್ಲಿ ನಡೆಯುತ್ತಿವೆ.
10. ಡಯಟ್ ಸಂಸ್ಥೆಯಲ್ಲಿ ಮಕ್ಕಳ ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣಕ್ಕೆ ಉತ್ತಮ ಕಂಪ್ಯೂಟರ್ ಸೌಲಭ್ಯ, ಲ್ಯಾನ್, ಇಂಟರ್‌ನೆಟ್ ವ್ಯವಸ್ಥೆ ಇದ್ದು ಸಹ್ಯಾದ್ರಿ ಡಿ.ಇಡಿ ಶಿಕ್ಷಕ ಶಿಕ್ಷಣ ಸಂಸ್ಥೆಯಲ್ಲಿ ಇದರ ಕೊರತೆ ಸ್ವಲ್ಪ ಮಟ್ಟಿಗೆ ಕಂಡುಬರುತ್ತದೆ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**4. ಈ ಕೆಳಗಿನ ಶೀರ್ಷಿಕೆಗಳನ್ನು ಓದಿ ನೀವು ನಡೆಸುವ ತರಬೇತಿ ಕಾರ್ಯಕ್ರಮಗಳಲ್ಲಿನ ತರಬೇತಿ ಯೋಜನೆ ಹಾಗೂ ತಂತ್ರ(ವಿಧಾನ)ಗಳಲ್ಲಿ ಅವುಗಳನ್ನು ಅಳವಡಿಸುವ ಬಗ್ಗೆ ಅವಲೋಕನ ನಡೆಸಿ.**

**ಹಗಲುಗನಸು**

ಮಕ್ಕಳನ್ನು ಪ್ರೀತಿ–ವಿಶ್ವಾಸಗಳ ಮೂಲಕ ಗೆದ್ದು ಅವರಿಗೆ ಸ್ವಾತಂತ್ರ್ಯ ಹಾಗೂ ಸ್ವಾಲಂಬನೆಯ ಶಿಕ್ಷಣವನ್ನು ನೀಡುವ ಉದ್ದೇಶವನ್ನು ಹೊಂದಿದ್ದ ಗೀಜೂಭ್ಯಾ ಬದೇಕಾ ಅವರ **‘*ಹಗಲುಗನಸು*’** ಅವರು ಪ್ರತ್ಯಕ್ಷವಾಗಿ ಕಂಡುಕೊಂಡ ಪ್ರಾಯೋಗಿಕ ಅನುಭವಗಳ ಸಾರ ಸಂಗ್ರಹ. ವಿದ್ಯಾರ್ಥಿಗಳನ್ನು ಬೆಳೆಸುವ ಅವರ ಹೊಸ ಪರಿಕಲ್ಪನೆಗಳನ್ನೊಳಗೊಂಡ ಈ ಪುಸ್ತಕ ಪ್ರಕಟಗೊಂಡ 70 ವರ್ಷಗಳ ನಂತರವಾದರೂ ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಈ ವಿಚಾರಗಳನ್ನು ಅಳವಡಿಸಲಾಗುತ್ತಿರುವುದು ಸಂತಸದ ಸಂಗತಿ. ಸರ್ವ ಶಿಕ್ಷಣ ಅಭಿಯಾನದಡಿಯಲ್ಲಿ ಬದಲಾಗುತ್ತಿರುವ ಬೋಧನಾ ವಿಧಾನ–ಕಲಿಕಾ ವಿಧಾನಗಳು ಗೀಜೂಭ್ಯಾ ಬದೇಕಾರವರ ಯೋಚನೆ – ಯೋಜನೆಗಳೊಂದಿಗೆ ಹೊಂದಿಕೆ ಯಾಗುತ್ತಿರುವುದೂ ಸತ್ಯ.

**‘*ಹಗಲುಗನಸು*’** ಪುಸ್ತಕದಲ್ಲಿ ಅವರು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಹಾಡು, ಕಥೆ, ಅಭಿನಯ, ಕುಣಿತ, ಆಟ, ನಾಟಕ, ಹೊರಸಂಚಾರ, ಚಿತ್ರ, ಭಿತ್ತಿ ಪತ್ರಿಕೆಗಳು, ವಾಚನಾಲಯ, ಪುಸ್ತಕಗಳು ಎಷ್ಟು ಪ್ರಾಮುಖ್ಯ ಹಾಗೂ ಪೂರಕ ಎನ್ನುವುದನ್ನು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ. *ಮಕ್ಕಳ ಮುಂದೆ ಸೋಲುವುದು, ಆ ಮೂಲಕ ಅವರನ್ನು ಗೆಲ್ಲುವುದು’* ಎನ್ನುವ ಅವರ ತಂತ್ರ ವಿದ್ಯಾರ್ಥಿಗಳ ಮೇಲೆ ಅದ್ಭುತವಾದ ಪರಿಣಾಮ ಬೀರಿದೆ. ಇದು ಸಾರ್ವಕಾಲಿಕ ಸತ್ಯವೂ ಹೌದು. ಇಂತಹ ವಿದ್ಯಾರ್ಥಿಗಳನ್ನು ಗೆಲ್ಲುವ ಹಲವು ತಂತ್ರಗಳನ್ನು ಇಲ್ಲಿ ಅಭಿವ್ಯಕ್ತಿಸಿದ್ದಾರೆ. ಮಕ್ಕಳೊಂದಿಗೆ ಪ್ರೀತಿ–ವಿಶ್ವಾಸ ಹುಟ್ಟುವ ಹಾಗೆ ಇರಬೇಕಾದ ನಮ್ಮ ವರ್ತನೆಗಳ ಬಗ್ಗೆಯೂ ಪ್ರತ್ಯಕ್ಷ ಅನುಭವಗಳನ್ನು ಹಂಚಿಕೊಂಡಿದ್ದಾರೆ. ಅನುಭವದ ಮೂಲಕ ಕಲಿಕೆ ಪರಿಣಾಮಕಾರಿಯಾಗಿ ನಡೆಯಲು ಸಾಧ್ಯ ಎನ್ನುವ ಅವರ ನಂಬಿಕೆ 1 ವರ್ಷದ ಪ್ರಯೋಗದ ಬಳಕದ ಯಶಸ್ಸೇ ಹೇಳುತ್ತದೆ. *ವಿದ್ಯಾರ್ಥಿಗಳ ಸರ್ವತೋಮುಖ ಅಭಿವೃದ್ಧಿಯೇ ಶಿಕ್ಷಣದ ಮೂಲ ಉದ್ದೇಶ*’ ಎನ್ನುವ ಮಾತಿಗೆ ಮಕ್ಕಳು ತಮಗರಿವಿಲ್ಲದಂತೆಯೇ ಪಾತ್ರರಾಗುವುದು ಈ ಪುಸ್ತಕ ಓದುತ್ತಾ ಹೋದಂತೆ ಅನಿಸುತ್ತದೆ.

ಇಂದು ಶಿಕ್ಷಕರಿಗೆ ನೀಡಲಾಗುತ್ತಿರುವ ವಿವಿಧ ತರಬೇತಿಗಳು ಹಾಗೂ ಆ ಮೂಲಕ ವಿದ್ಯಾರ್ಥಿಗಳನ್ನು ಸಾಮರ್ಥ್ಯಾಧಾರಿತ ಕಲಿಕೆಗೆ ಪ್ರೇರೇಪಿಸುತ್ತಿರುವ ಹಿಂದೆ ಇಂತಹ ಅನೇಕ ಅನುಭವೀ ಶಿಕ್ಷಣ ತಜ್ಞರುಗಳ ಕೊಡುಗೆಗಳಿರಬಹುದು. ಆದರೆ ಸಹಸ್ರಾರು ಮಕ್ಕಳ ನಡುವೆ ಸದಾ ಇರುವ ಶಿಕ್ಷಕರು ಇದರ ಸಫಲತೆಗೆ ಸ್ವಯಂ–ಆಸಕ್ತಿಯಿಂದ ಕಾರ್ಯೋನ್ಮುಖರಾಗಬೇಕಾದ ಅಗತ್ಯವೂ ಇದೆ. ಅಪಾರವಾದ ಕಾಳಜಿ ಹಾಗೂ ಒಂದಿಷ್ಟು ಪ್ರಯೋಗಶೀಲ ಮನಸ್ಸೂ ಕೂಡಾ ಹೊಂದಿರಬೇಕಾಗಿದೆ. ಯಾವ ಬೋಧನಾವಿಧಾನದಿಂದ ಮಕ್ಕಳು ಸುಲಭವಾಗಿ ಗ್ರಹಿಸುತ್ತಾರೋ ಎನ್ನುವ ಸೂಕ್ಷ್ಮ ದೃಷ್ಟಿಯೊಂದಿಗೆ ಒಂದಿಷ್ಟು ಪ್ರೀತಿ–ತಾಳ್ಮೆ ಇದ್ದರೆ ಯಶಸ್ಸು ಖಂಡಿತಾ ಎನ್ನುವುದು 'ಹಗಲುಗನಸು' ಪುಸ್ತಕದ ಕನಸು.

ಇದರಲ್ಲಿ ಹೇಳಲಾಗಿರುವ ವಿಚಾರಗಳು, ಬೋಧನಾ ವಿಧಾನಗಳು ಶಿಕ್ಷಕರಿಗೆ ಈಗಾಗಲೇ ನೀಡಲಾಗಿರುವ ತರಬೇತಿಗಳಲ್ಲಿ ಅಲ್ಲಲ್ಲಿ ಕಂಡು ಬಂದಿದೆ. ಗೀಜೂಭಾಯಿಯವರು ಆರಂಭದ ಮೂರು ತಿಂಗಳಲ್ಲಿ ಮಕ್ಕಳ ಆಸಕ್ತಿಯನ್ನು ಕೆರಳಿಸುವ ಚಟುವಟಿಕೆಗಳಾದ ಕಥೆಗಳು, ಆಟಗಳು, ಪುಸ್ತಕ ಪ್ರೀತಿ. ಆದರ್ಶವಾಚನ, ಹಸ್ತಪತ್ರಿಕೆ, ಸ್ವಚ್ಛತೆ ಹಾಗೂ ಶಿಸ್ತಿನ ಪ್ರಯತ್ನಗಳ ಮೂಲಕ ಆರಿಸುವ, ಗ್ರಹಿಸುವ, ಓದುವ ಹಾಗೂ ಬರೆಯುವ ಸಾಮರ್ಥ್ಯಗಳನ್ನು ಬೆಳೆಸುತ್ತಾ ಹೋಗುತ್ತಾರೆ. ದಿಢೀರ್ ಫಲಿತಾಂಶವನ್ನು ಬಯಸದೆ ಶಾಶ್ವತವಾದ ಸಾರ್ಮರ್ಥ್ಯ ಬೆಳೆಸುವ ದೃಷ್ಟಿಕೋನದಿಂದ ಈ ಎಲ್ಲಾ ಚಟುವಟಿಕೆಗಳನ್ನೇ ನಿಜವಾದ ಶಿಕ್ಷಣವೆಂದು ಸ್ವೀಕರಿಸಿದ್ದಾರೆ.

ಭಾಷಾ ಬೋಧನೆಯಲ್ಲಿ ನಾವು ಬಹುಮುಖ್ಯವೆಂದು ಹೇಳುವ ವ್ಯಾಕರಣ ಶಿಕ್ಷಣಕ್ಕೆ, **ಬಧೇಕಾ**ರವರು ತಮ್ಮದೇ ಆದ ಪ್ರಯೋಗಗಳನ್ನು ಮಾಡಿ ಯಶಸ್ವಿಯಾಗಿದ್ದಾರೆ. ನಾಮಪದ, ಸರ್ವನಾಮ, ವಿಶೇಷಣ, ಕ್ರಿಯಾ ಪದ, ಅವ್ಯಯ ಹಾಗೂ ಇನ್ನೂ ಹಲವಾರು ಅಂಶಗಳನ್ನು ಆಟಗಳ, ಚಟುವಟಿಕೆಗಳ ಮೂಲಕ ಬೋಧಿಸುವ ಕ್ರಮವನ್ನು ಇಲ್ಲಿ ಉದಾಹರಣೆಯೊಂದಿಗೆ ವಿವರಿಸಿದ್ದಾರೆ. ವ್ಯಾಖ್ಯೆಯ ಗೊಂದಲದಲ್ಲಿ ಬೀಳದೆ ವ್ಯಾಕರಣದ ಪರಿಚಯವನ್ನು ಆಟಗಳ ಮೂಲಕ ಮಾಡಿಸುವುದು, ನಂತರ ನಿಧಾನವಾಗಿ ಅವುಗಳ ಶಾಸ್ತ್ರೀಯ ವ್ಯಾಖ್ಯೆಯನ್ನು ನೀಡುವುದು, ಅವರ ಯಶಸ್ವೀ ಪ್ರಯೋಗದ ಸಾರ. ಈ ಚಟುವಟಿಕೆಗಳನ್ನು ನಮ್ಮ ಶಿಕ್ಷಕರ ತರಬೇತಿಯಲ್ಲಿ ಬಳಸಿಕೊಳ್ಳುವುದು ಸೂಕ್ತ.

ಭೂಗೋಳ ಬೋಧನೆಯ ಬಗ್ಗೆ **ಬಧೇಕಾ**ರವರು ತಮ್ಮದೇ ಆದ ವಿಧಾನಗಳನ್ನು ಈ ಪುಸ್ತಕದಲ್ಲಿ ತಿಳಿಸುತ್ತಾರೆ. ಬೋಧನೆಯಲ್ಲಿ ನಕಾಶೆಗಳ ಅವಶ್ಯಕತೆ ಹಾಗೂ ಅದರ ಪರಿಣಾಮವನ್ನು ಇಲ್ಲಿ ವಿವರವಾಗಿ ವರ್ಣಿಸಲಾಗಿದೆ. ವಿದ್ಯಾರ್ಥಿಗಳಿಗೆ

ಅವರ ಪರಿಸರದ ಅನುಭವ ಕೊಡಲು, 'ಹೊರಸಂಚಾರ'ವನ್ನು ಸಾಕಷ್ಟು ಬಾರಿ ಮಾಡಿಸಿದ್ದಾರೆ. ಭೂಗೋಳ ಬೋಧನೆ ಹಾಗೂ ಕಲಿಕೆಗೆ 'ಯಥಾದರ್ಶನ ಚಿತ್ರಕಲೆ'ಯೂ ಪೂರಕ ಎನ್ನುವ ಅವರು ಇದರ ಅಭ್ಯಾಸಕ್ಕೆ ಮಕ್ಕಳಿಗೆ ಪ್ರೇರಣೆಯಾಗಿ ಯಶಸ್ವಿಯಾಗಿದ್ದಾರೆ. ದೂರದರ್ಶಕದ ಬಳಕೆ, ಭೂಗೋಳ ವಾಚನಾಲಯ, ಪ್ರವಾಸ ಗ್ರಂಥಗಳು, ಯಾತ್ರಾದರ್ಶನದ ಪುಸ್ತಕಗಳ ಮೂಲಕ ಮಕ್ಕಳಲ್ಲಿ ಭೌಗೋಳಿಕ ಆಸಕ್ತಿಯನ್ನು ಕುದುರಿಸಿ ಕಲಿಕೆಗೆ ಪ್ರೇರಣೆ ನೀಡಬಹುದೆಂದು ಅವರ ಅನುಭವ. ಅವರೇ ಹೇಳುವಂತೆ, ನನ್ನ ಉದ್ದೇಶ ಮಕ್ಕಳಿಗೆ ಇಡೀ ಜಗತ್ತಿನ ಪರಿಚಯ ಮಾಡಕೊಡುವುದಲ್ಲ. ಜಗತ್ತು ವಿಶಾಲವಾಗಿದೆ ಎಂಬ ಸಂಗತಿಯನ್ನು ಅವರ ಮನಸ್ಸಿನಲ್ಲಿ ಮೂಡಿಸುವುದಾಗಿತ್ತು. ಪ್ರಪಂಚದ ಅನೇಕ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ, ತಿಳಿದುಕೊಳ್ಳಲು ಇಂತಹ ಸಾಧನಗಳು ಇವೆ ಎನ್ನುವುದನ್ನು ತಿಳಿಸುವುದಾಗಿತ್ತು.

ಗಣಿತ ಬೋಧನೆಗೆ ***ಮಾಂಟಿಸೋರಿ*** ಪದ್ಧತಿಯಲ್ಲಿ ಒಳ್ಳೆಯ ವಿಧಾನಗಳಿವೆ ಎನ್ನುವುದು ಅವರ ಅಭಿಪ್ರಾಯ. "ಎಲ್ಲವೂ ಸಾಧ್ಯವಿದೆ" ನಾವು ಪ್ರಯತ್ನ ಮಾಡಬೇಕು. ಅದರ ಜೊತೆಗೆ ಒಂದಿಷ್ಟು ಉತ್ಸಾಹವಿರಬೇಕು.

ಪ್ರಾಥಮಿಕ ಶಾಲೆಯ ಸ್ವರೂಪವೇ ಬದಲಾಗುವಷ್ಟು ಕಾರ್ಯಮಾಡಿ ತೋರಿಸಬಹುದು. ಇಂದಿನ ಶಿಕ್ಷಣದ ಸ್ವರೂಪವನ್ನೇ ಬದಲಾಯಿಸಬಹುದು. ಆದರೆ ನಮ್ಮಲ್ಲಿ ಕೆಲಸಮಾಡುವವರ ಕೊರತೆ ಇದೆ. ಶ್ರದ್ಧೆ, ಆತ್ಮವಿಶ್ವಾಸ, ಅಖಂಡ ಏಕಾಗ್ರತೆಯ ಅವಶ್ಯಕತೆ ಇದೆ.

ಸುಧಾರಣೆಯ ಮನಸ್ಸಿಲ್ಲದ, ಪ್ರಯೋಗಶೀಲತೆಗೆ ಒಗ್ಗಿಕೊಳ್ಳದವರು ಸ್ವಂತ ಇಚ್ಛೆಯಿಂದ ಹಿಂದೆ ಸರಿಯಬೇಕು. ಸೃಜನಾತ್ಮಕ ಶಿಕ್ಷಾವಿದರಿಗೆ, ವಿಚಾರಶೀಲ ಶಿಕ್ಷಕರಿಗೆ ಶಾಲೆಗಳು ಸ್ಥಾನವನ್ನು ಕಲ್ಪಿಸಬೇಕು. ಹೊಸಶಿಕ್ಷಣ ವ್ಯವಸ್ಥೆಯು ಮಕ್ಕಳಲ್ಲಿ ಉಜ್ವಲ ಭವಿಷ್ಯದ ಮಧುರ ಸ್ವಪ್ನವನ್ನು ಕಾಣುವಂತಾಗಬೇಕು ಎನ್ನುವುದೇ *ಈ **ಹಗಲುಗನಸಿ**ನ ಆಶಯ.*

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**2. " ತಾರೆ ಝಮೀನ್ ಪರ್ " ಚಲನ ಚಿತ್ರ ವೀಕ್ಷಣೆಯ ನಂತರ ಮನದಾಳದಲ್ಲಿ ಮೂಡಿದ ಭಾವನೆಗಳು :**

ಮಕ್ಕಳು ಚಿಗುರಿನೊಳಗಿಂದ ಹೊರಬಂದು ಅರಳಲು ಸಿದ್ಧವಾದ ಮೊಗ್ಗಿನಂತೆ. ಒತ್ತಾಯಪೂರ್ವಕವಾಗಿ ಅರಳಿಸಿದರೆ ಅದು ಬಾಡಿಹೋಗುತ್ತದೆ. ಅಂತೆಯೇ ಬಲವಂತವಾಗಿ ಮಕ್ಕಳ ಮೇಲೆ ಹೇರಲಾಗುವ ಅಭಿಪ್ರಾಯಗಳು, ಅವರ ಮೃದು ಮನಸ್ಸನ್ನು ಘಾಸಿಗೊಳಿಸುತ್ತದೆ.

ಮನೆಯಲ್ಲಿ ಹೆತ್ತವರು, ಶಾಲೆಯಲ್ಲಿ ಶಿಕ್ಷಕರು, ನೆರೆಹೊರೆಯಲ್ಲಿ ಸಪಾಠಿಗಳು ಹಾಗೂ ಇತರರು, ಹೀಗೆ ಎಲ್ಲರೂ ಮಗುವಿನ ಇಚ್ಛೆಗೆ ವಿರುದ್ಧವಾಗಿಯೇ ನಡೆದುಕೊಂಡು, ಅರಳುವ ಮನಸ್ಸನ್ನು ಸಂಪೂರ್ಣವಾಗಿ ಮುದುಡಿಸುವಂತಹ ಹೃದಯವಿದ್ರಾವಕ ಘಟನೆಗಳು ಈ ಚಲನ ಚಿತ್ರದಲ್ಲಿ ಎಳೆಎಳೆಯಾಗಿ ಬಿಡಿಸಿಕೊಳ್ಳುತ್ತವೆ.

ತಂದೆ ತಾಯಿಗಳ ಯಾಂತ್ರಿಕವಾದ ಬದುಕಿನಲ್ಲಿ, ದಿನದ ಒಂದು ಕ್ಷಣವೂ ತಮ್ಮ ಮಕ್ಕಳ ಜೊತೆ ಪ್ರೀತಿ ಹಂಚಿಕೊಳ್ಳಲು ಅವಕಾಶವಿಲ್ಲ. ಅಲ್ಲದೇ ಹೆತ್ತವರು ಚಿಕ್ಕ ಮಕ್ಕಳಲ್ಲಿ ತಮ್ಮದೇ ಬುದ್ಧಿಮಟ್ಟದ ನಿರೀಕ್ಷೆ ಮಾಡುತ್ತಾರೆ. ಆದರೆ ಮಗು ಮಾತ್ರ ಇದ್ಯಾವುದರ ಪರಿವೆಯೇ ಇಲ್ಲದೇ ತನ್ನದೇ ಆದ ಪ್ರಪಂಚದಲ್ಲಿ ವಿಹರಿಸುತ್ತಿರುತ್ತದೆ.

ಇನ್ನು ಶಾಲೆಗಳೋ ಅತಿಯಾದ ಶಿಸ್ತಿನ ಹೆಸರಿನಲ್ಲಿ ಮಕ್ಕಳಿಗೆ ಪ್ರತಿದಿನ ಅತ್ಯಂತ ಹೊಸರೀತಿಯ ಶಿಕ್ಷೆಗಳನ್ನು ನೀಡಲು ಉತ್ಸುಕರಾಗಿರುತ್ತವೆ. ಶಿಕ್ಷಕರ ವರ್ತನೆಯಂತೂ ಅತಿರೇಕದ ಪರಮಾವಧಿ! ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಕನಿಷ್ಠ ಸಾಮರ್ಥ್ಯವನ್ನು ಹೊಂದಿರದ ವ್ಯಕ್ತಿಗಳೇ ಇಂದಿನ ಹಲವು ಶಾಲೆಗಳಲ್ಲಿ ಶಿಕ್ಷಕರಾಗಿದ್ದಾರೆ. ಹೀಗಿರುವಾಗ ಸರಕಾರ ಹತ್ತಾರು ಯೋಜನೆಗಳನ್ನು ಹಮ್ಮಿಕೊಡು ಶತಪ್ರಯತ್ನ ಮಾಡಿದರೂ, ಮಕ್ಕಳಿಗೆ ಶಾಲೆ ಆಕರ್ಷಣೀಯವಾಗಲು ಸಾಧ್ಯವೇ ಇಲ್ಲ. ಮನೆ, ಶಾಲೆಗಳು ಬಂಧೀಖಾನೆಗಳೆನಿಸಿ, ಇತರೇ ಸ್ಥಳಗಳು ಹೆಚ್ಚು ಮಕ್ಕಳಿಗೆ ಆಸಕ್ತಿದಾಯಕವಾಗಿರುವುದರಿಂದಲೇ, ಇಂದು ಅರ್ಧದಲ್ಲೇ ಶಾಲೆ ಬಿಡುತ್ತಿರುವ ಮಕ್ಕಳ ಸಂಖ್ಯೆ ಹೆಚ್ಚಾಗಿದೆ.

ಪೋಷಕರನ್ನು ಶಾಲೆಗೆ ಕರೆಯಿಸಿ, ಮಗುವನ್ನು ಎದುರೇ ನಿಲ್ಲಿಸಿ, ಶಿಕ್ಷಕರನ್ನೂ ಬರಹೇಳಿ, ಮುಖ್ಯೋಪಾಧ್ಯಾಯರು, ಗುಬ್ಬಿಯ ಮೇಲೆ ಬ್ರಹ್ಮಾಸ್ತ್ರ ಪ್ರಯೋಗಿಸುವಂತೆ,

ಮಾಡುವ ಮಾತಿನ ಪ್ರಹಾರವಂತೂ ತೀರಾ ಅಸಹನೀಯವೆನಿಸುತ್ತದೆ.

ವಸತಿ ಶಾಲೆಗಳ ಬಗ್ಗೆ ತಿಳಿಸಬೇಕೆಂದರೆ, ತೀರಾ ಅನಿವಾರ್ಯ ಪರಿಸ್ಥಿತಿಯಲ್ಲಿ ಮಾತ್ರ ಇವುಗಳು ಸಹಕಾರಿಯಾಗಬಲ್ಲವು. ಆದರೆ ಈ ಚಲನ ಚಿತ್ರದಲ್ಲಿ ನಾಯಕನಾಗಿರುವ ನಿಶಾನ್ ನಂದಕಿಶೋರ್ ಅವಸ್ತಿ ಎನ್ನುವ ಮಗುವಿಗೆ ಇಷ್ಟವಿಲ್ಲದಿದ್ದರೂ, ಪರಿಪರಿಯಾಗಿ ಬೇಡಿಕೊಂಡರೂ ವಸತಿ ಶಾಲೆಗೆ ಸೇರಿಸಲಾಗುತ್ತದೆ. ಆ ಶಾಲೆಗೆ ಸೇರಿದ ಆರಂಭದಲ್ಲಿ, ಕುಟುಂಬದವರಿಂದ ದೂರವಾಗಿ, ಆ ಮಗು ಪಡುವ ಮಾನಸಿಕ ವೇದನೆ, ಸ್ನಾನದ ಮನೆಯಲ್ಲಿ ಯಾರಿಗೂ ಕೇಳಿಸದಂತೆ ನಳ್ಳಿಯ ನೀರನ್ನು ಜೋರಾಗಿ ಬರುವಂತೆ ಮಾಡಿ, ಮನಃ ಪೂರ್ತಿ ಅಳುವ ಸನ್ನಿವೇಶವಂತೂ  ಎಂಥಾ ಕಲ್ಲು ಹೃದಯಿಗಳನ್ನೂ ಕರಗಿಸುತ್ತದೆ. ಮಗು ಕ್ರಮೇಣ ತನ್ನ ತಂದೆತಾಯಿಯರಿಂದ ದೂರವಿರಲು ಬಯಸುತ್ತದೆ. ತಾಯಿಯ ಮಮತೆ, ತಂದೆಯ ಪ್ರೀತಿ ಎಂದರೇನೆಂಬುದನ್ನೇ ಮರೆತುಬಿಡುತ್ತದೆ.

ವಸತಿ ಶಾಲೆಯಲ್ಲಿ ಅಲ್ಪಾವಧಿಗೆ ಶಿಕ್ಷಕರಾಗಿ ಬರುವ ರಾಂ ಶಂಕರ್ ನಿಕುಂ ಮಕ್ಕಳ ಮನಸ್ಸನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ನಡೆಸುವುದು ಪ್ರಶಂಸನೀಯ. ಮಕ್ಕಳ ಮಟ್ಟಕ್ಕೆ ಇಳಿದು, ಮಕ್ಕಳೊಂದಿಗೆ ಮಗುವಾಗಿ ಬೆರೆತು ಮಕ್ಕಳನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆ. ಪ್ರತಿಯೊಂದು ಮಗುವನ್ನು ವೈಯಕ್ತಿಕವಾಗಿ ಗಮನಿಸಿ, ಆಸಕ್ತಿ ನಿರಾಸಕ್ತಿಗಳನ್ನು ತಿಳಿಯಲು ಪ್ರಯತ್ನಿಸುತ್ತಾರೆ. ನಿಶಾನ್‌ನ ನಿಜವಾದ ಸಮಸ್ಯೆಗಳನ್ನು ಅರಿಯಲು ಹರಸಾಹಸಪಡುವ ಶಿಕ್ಷಕರು, ಪೋಷಕರನ್ನು ಭೇಟಿಯಾಗಿ, ಮಗುವನ್ನು ಬೆಳೆಸುವಲ್ಲಿ ಅವರಿಂದಾದ ತಪ್ಪನ್ನು ಮನದಟ್ಟು ಮಾಡಿಸುತ್ತಾರೆ. ಇಂತಹ ಶಿಕ್ಷಕರು ಇಂದಿನ ದಿನಗಳಲ್ಲಿ ಬಹಳ ಅಪರೂಪ.

ಬರೆಯಲು, ಓದಲು, ಚಿತ್ರ ಬಿಡಿಸಲು, ನರ್ತಿಸಲು, ಇತರರೊಂದಿಗೆ ಬೆರೆಯಲು ನಿರಾಕರಿಸುತ್ತಿದ್ದ ಕಥಾನಾಯಕ ನಿಶಾನ್‌ಗೆ ಈ ಶಿಕ್ಷಕ, ಒಮ್ಮೆಲೇ ಒತ್ತಾಯಿಸದೇ, ಆ ಮಗು ಮಾಡಿದ ಎಲ್ಲಾ ಕೆಲಸಗಳನ್ನು ಪ್ರೋತ್ಸಾಹಿಸುತ್ತಾ, ವಿಶೇಷ ತರಗತಿಗಳ ಮೋಲಕ ಆತನಲ್ಲಿ ಆತ್ಮವಿಶ್ವಾಸ ಮೂಡಿಸುತ್ತಾರೆ. ಈ ಮೂಲಕ ಶಿಕ್ಷಕನ ಸ್ಥಾನಕ್ಕೆ ನೈಜ ಅರ್ಥ ಕೊಡುವ ವ್ಯಕ್ತಿಯಾಗುತ್ತಾನೆ. ತಮ್ಮ ಮಗುವಿನ ಪ್ರತಿಭೆಯನ್ನು ತಾವು ಗುರುತಿಸದೇ, ಬೇರೆಯವರಿಂದ ತಿಳಿದ ತಂದೆತಾಯಿಗಳು ಈ ಚಲನ ಚಿತ್ರದಲ್ಲಷ್ಟೇ ಅಲ್ಲದೇ ನಮ್ಮ ನಡುವೆಯೇ ಸಾಕಷ್ಟಿದ್ದಾರೆ.

ಮಗುವಿನಲ್ಲಿ ಸುದೃಢವಾದ ಆತ್ಮವಿಶ್ವಾಸ ಮೂಡಿಸಿ, ಆತನಲ್ಲಿರುವ ಅತ್ಯದ್ಭುತ ಪ್ರತಿಭೆಯನ್ನು ಜಗತ್ತಿಗೇ ತಿಳಿಸಲು ಶಿಕ್ಷಕರು ಆಯೋಜಿಸುವ ಚಿತ್ರಕಲಾ ಸ್ಪರ್ಧೆ, ಮುಗ್ಧ ಮನಸ್ಸುಗಳನ್ನು ಮಾತೆಂಬ ಮೊನಚಾದ ಮುಳ್ಳಿನಿಂದ ಚುಚ್ಚುವ ವ್ಯಕ್ತಿಗಳಿಗೆ ಮೌನ ಉತ್ತರ ನೀಡುತ್ತದೆ. ಒಬ್ಬ ಶಿಕ್ಷಕ ತೋರಿದ ಕಾಳಜಿ, ನೀಡಿದ ಪ್ರೀತಿ ಆ ಮಗುವನ್ನು ಗಗನದೆತ್ತರಕ್ಕೆ ಬೆಳೆಸುತ್ತದೆ. ಆ ಮಗುವೂ ಶಿಕ್ಷಕನೇ ಸರ್ವಸ್ವ ಎಂದು ಭಾವಿಸುತ್ತದೆ. ಇಂತಹ ಶಿಕ್ಷಕರ ಸಂಖ್ಯೆ ಸಾವಿರ ಸಾವಿರವಾಗಲಿ ಎಂಬುದೇ ನನ್ನ ಹಾರೈಕೆ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

(2.)

**ಡಿ.ಎಸ್.ಇ.ಆರ್.ಟಿ ವೆಬ್‌ಸೈಟ್ http://dsert.kar.nic.in/frame.html ನಲ್ಲಿರುವ Contents chapter ನಲ್ಲಿರುವ Teacher Education ಭಾಗಕ್ಕೆ ಭೇಟಿ ಕೊಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1. **ಡಯಟ್‌ನ ವತಿಯಿಂದ ನಿರ್ವಹಿಸಲ್ಪಡುತ್ತಿರುವ ಯಾವುದಾದರೂ ಎರಡು ಕಾರ್ಯಕ್ರಮಗಳನ್ನು ಆಯ್ಕೆ ಮಾಡಿ ಆ ಕಾರ್ಯಕ್ರಮಗಳನ್ನು ಕಾರ್ಯರೂಪಕ್ಕೆ ತರಲು ಡಯಟ್‌ನ ಸಿಬ್ಬಂದಿಗಳಲ್ಲಿ ಅವಶ್ಯವಾಗಿ ಇರಬೇಕಾದ ಸಾಮರ್ಥ್ಯಗಳನ್ನು ಪಟ್ಟಿ ಮಾಡಿ ವಿವರ ;**

| **ಆಯ್ಕೆ ಮಾಡಿದ ಕಾರ್ಯಕ್ರಮ** | **ಇರಬೇಕಾದ ಸಾಮರ್ಥ್ಯ** |
| --- | --- |
| 1. **ಮಾಹಿತಿ ಸಿಂಧು(ಶಾಲೆಗಳಲ್ಲಿ ಕಂಪ್ಯೂಟರ್ ಶಿಕ್ಷಣ)** | 1. ಕಂಪ್ಯೂಟರ್ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣದ ಪರಿಚಯ.<br>2. ಕಂಪ್ಯೂಟರ್‌ಶಿಕ್ಷಣ ವಹಿಸಿಕೊಂಡಿರುವ ನಿರ್ವಹಣಾ ಸಂಸ್ಥೆಯ ಹೆಸರು ಮತ್ತು ಅವರ ಜವಾಬ್ದಾರಿಯ ಬಗ್ಗೆ ಅರಿವು.<br>3. ಇಲಾಖೆ ನಿರ್ವಹಣಾ ಸಂಸ್ಥೆಯ ಜತೆ ಮಾಡಿಕೊಂಡ ಒಪ್ಪಂದ ಬಗ್ಗೆ ಸಮಗ್ರ ಮಾಹಿತಿ.<br>4. ಶಾಲೆಯಲ್ಲಿ ಪೂರೈಕೆ ಮಾಡಲಾದ ಕಂಪ್ಯೂಟರ್ ಮತ್ತು ಪರಿಕರಗಳ ಯಂತ್ರಾಂಶ ಮತ್ತು ತಂತ್ರಾಂಶದ ಮಾಹಿತಿ.<br>5. ಬೇರೆ ಬೇರೆ ಪ್ರವರ್ಗಗಳ ಶಾಲೆಗಳ ಪಟ್ಟಿ.<br>6. ಪರಿಣಾಮಕಾರಿ ಕಂಪ್ಯೂಟರ್ ಶಿಕ್ಷಣ ಮತ್ತು ಕಂಪ್ಯೂಟರ್ ಆಧಾರಿತ ಶಿಕ್ಷಣವನ್ನು ಅನುಷ್ಠಾನಗೊಳಸುವ ದೃಷ್ಟಿಯಿಂದ ಪ್ರಗತಿ ಪರಿಶೀಲನೆ ಮತ್ತು ಅನುಪಾಲನೆ ಮಾಡುವ ಸಾಮರ್ಥ್ಯವಿರಬೇಕು.<br>7. ಅಂತರ್‌ಜಾಲ, ಇಮೇಲ್ ಪರಿಚಯವಿರಬೇಕು.<br>8. ಡಯಟ್ ಸಂಸ್ಥೆಯಲ್ಲಿ ಕಂಪ್ಯೂಟರ್‌ಗಳ ಸದ್ಬಳಕೆ<br>9. ಯೋಜನಾ ಆಧಾರಿತ ಕಲಿಕೆ ದೃಷ್ಟಿಯಿಂದ ಶಿಕ್ಷಕರಿಗೆ ರಜಾ ಅವಧಿಯಲ್ಲಿ ಕಂಪ್ಯೂಟರ್ ತರಬೇತಿ, ಇಂಟೆಲ್ ತರಬೇತಿಯ ಜವಾಬ್ದಾರಿ ಮತ್ತು ಅನುಷ್ಠಾನ.<br>10. ಶಾಲಾ ಮುಖ್ಯಸ್ಥರ ಸಭೆ ಕರೆದು ಕಂಪ್ಯೂಟರ್ ಶಿಕ್ಷಣದ ನಿರಂತರ ಪ್ರಗತಿ. |

| | |
|---|---|
| **ಆಯ್ಕೆ ಮಾಡಿದ ಕಾರ್ಯಕ್ರಮ**<br><br>**2. ಶಿಕ್ಷಕರಿಗೆ ಉಪಗ್ರಹ ಆಧಾರಿತ ದೂರಸಂಪರ್ಕ ತರಬೇತಿ.** | 1. ಸಂಸ್ಥೆಯಲ್ಲಿ ಉಪಗ್ರಹ ಆಧಾರಿತ ತರಬೇತಿಯ ಪೂರಕ ವ್ಯವಸ್ಥೆ ಹಾಗೂ ಸಾಮಗ್ರಿಗಳ ಅಳವಡಿಕೆ ಹಾಗೂ ಆಪರೇಟ್ ಮಾಡುವುದರ ಬಗ್ಗೆ ಸಂಪೂರ್ಣ ಅರಿವಿರಬೇಕು.<br>2. ಉಪಗ್ರಹ ತರಬೆತಿ ಯಾವ ಸ್ಟುಡಿಯೋದಿಂದ ಪ್ರಸಾರವಾಗುತ್ತದೆ ಎಂಬ ಬಗ್ಗೆ ಮಾಹಿತಿ.<br>3. ಪ್ರಸಾರವಾಗುವ ತರಬೇತಿಯ ಸಮಯ, ಅದರ ಫ್ರಿಕ್ವೆನ್ಸಿ, ಸಿಂಬಲ್ ರೇಟ್, ಸಿಗ್ನಲ್, ಡಿಜಿಟಲ್, ಮ್ಯಾನ್ಯುವೆಲ್, ರಿಸೀವರ್, ಟಿ.ವಿ ಆಪರೇಟ್ ಮಾಡುವ ವಿಧಾನ ಗೊತ್ತಿರಬೇಕು.<br>4. ಟೆಲಿಫೋನ್ ಫ್ಯಾಕ್ಸ್ ಎಲ್ಲಾ ವ್ಯವಸ್ಥೆಯನ್ನು ಸರಿಯಾಗಿ ಮೊದಲೇ ಗಮನಿಸಿ ಆನ್–ಏರ್ ಕಾರ್ಯಕ್ರಮಕ್ಕೆ ಸಜ್ಜಾಗಬೇಕು.<br>5. ತರಬೇತಿಯ ಮೊದಲೇ ಎಲ್ಲಾ ಶಿಕ್ಷಕರಿಗೂ ಮಾಹಿತಿ ನೀಡಿ ಸಕಾಲಕ್ಕೆ ಪ್ರಸಾರದ ಅರ್ಧ ಘಂಟೆ ಮೊದಲೇ ಶಿಕ್ಷಕರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು.<br>6. ಪ್ರಸಾರ ಪೂರ್ವದಲ್ಲಿ ನೋಂದಣಿ, ಕಾರ್ಯಕ್ರಮದ ಮಹತ್ವ ಮತ್ತು ತರಬೇತಿ ಸಾಹಿತ್ಯ ನೀಡಿ ಓದಲು ಮತ್ತು ನೀಡುವ ಚಟುವಟಿಕೆಯಲ್ಲಿ ಪಾಲ್ಗೊಳ್ಳಲು ಸೂಚಿಸಬೇಕು.<br>7. ಕಾರ್ಯಕ್ರಮವನ್ನು ನಿರ್ವಹಿಸಲು ಉತ್ತಮ ಸುಗಮಕಾರರಿಗಿರುವ ಎಲ್ಲ ಸಾಮರ್ಥ್ಯ ಹೊಂದಿರಬೇಕು.<br>8. ಕಾರ್ಯಕ್ರಮ ಪ್ರಸಾರದ ಪ್ರಶ್ನೋತ್ತರ ಸಂದ ರ್ಭದಲ್ಲಿ ಆಯಾ ಅಧಿವೇಶನಕ್ಕೆ ಸಂಬಂಧಪಟ್ಟ ಪ್ರಶ್ನೆಗಳನ್ನು ಕ್ರೋಡೀಕರಿಸಿ ಸ್ಟುಡಿಯೋವನ್ನು ಸಂಪರ್ಕಿಸಬೇಕು.<br>9. ದೂರ–ಸಂಪರ್ಕ ತರಬೆತಿಯು ಜಿಲ್ಲೆಯ ಎಲ್ಲಾ ಸ್ವೀಕೃತಿ ಕೇಂದ್ರಗಳಲ್ಲಿ ನಡೆಯುವ, ವ್ಯವಸ್ಥೆಯನ್ನು ಮೊದಲೇ ತಿಳಿದು ಪ್ರಸಾರದ ಬಗ್ಗೆ ಮತ್ತು ಫಲಾನುಭವಿಗಳ ಮಾಹಿತಿಯನ್ನು ಪಡೆದು ಸ್ಟುಡಿಯೋಗೆ ಫ್ಯಾಕ್ಸ್ ಮೂಲಕ ಕಳುಹಿಸಬೇಕು.<br>10. ಸ್ವೀಕೃತಿ ಕೇಂದ್ರಗಳಲ್ಲಿ ಮೂಲ ಸೌಕರ್ಯದ ಏರ್ಪಾಟು ಮಾಡಬೇಕು.<br>11. ತರಬೇತಿಯ ನಂತರ ಶಿಕ್ಷಕರಿಂದ ಹಿಮ್ಮಾಹಿತಿ ಪಡೆದು ಮೇಲಧಿಕಾರಿಗಳಿಗೆ ಕಳುಹಿಸಬೆಕು. |

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**2. ಈ ಎಲ್ಲಾ ಕಾರ್ಯಕ್ರಮಗಳನ್ನು ಕಳೆದೆರೆಡು ವರ್ಷಗಳಿಂದ ನಮ್ಮ ಡಯಟ್ ಸಂಸ್ಥೆಯಲ್ಲಿ ನೆಡೆಸಲಾಗಿದೆಯೇ? ಈ ವಿಷಯದ ಬಗ್ಗೆ ನಾನು ಗಮನಿಸಿದ ಅಂಶಗಳು.**

Nali – Kali (the activity based learning program),

- Chaitanya (activity based teaching methodology),
- Internship in D.Ed. Course (the pre service teacher education program),
- Bahumukhi (the Multi grade Multi level teaching methodology),
- Keli – Kali, (the direct to class room radio broadcasts,)
- The Edusat Project (Direct to class room video broadcasts),
- Shikshanadalli Rangakale (dramatisation of teaching techniques),
- Chinnara Angala (the summer bridge course for out of school children),
- Mahiti Sindhu (computer education in schools),
- Prerana (foundation course for newly recruited primary teachers),
- Training of teachers through teleconferencing,
- Introduction of activity based text books in all classes,
- Hosting of state text books on the web site,
- Akshara Dasoha (the hot cooked midday meal program for government and aided school children),
- Learning Guarantee Program started by Azim Premji Foundation and later extended to the entire state by the department.
- Evaluation of all children in V and VII standards (and children of four schools per cluster in II standard) in all government and aided primary schools in the state during 2005 – 06. under KSQAO.
- X standard Public Examination Reforms

ಹೌದು, ಬಹುತೇಕ ಕಾರ್ಯಗಳು ಕಳೆದೆರಡು ವರ್ಷಗಳಿಂದ ನಮ್ಮ ಡಯಟ್ ಸಂಸ್ಥೆಯಲ್ಲಿ ನಡೆಸಲಾಗುತ್ತಿವೆ.

**ಗಮನಿಸಿಸ ಅಂಶಗಳು :**

1. 6 ರಿಂದ 14 ವರ್ಷ ವಯಸ್ಸಿನ ಎಲ್ಲಾ ಮಕ್ಕಳಿಗೆ 8 ವರ್ಷದ ತೃಪ್ತಿಕರ ಗುಣಾತ್ಮಕ ಶಿಕ್ಷಣ ಒದಗಿಸುವುದು, ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಉತ್ತಮ ಪಡಿಸುವುದು
2. ಶಿಕ್ಷಕರ ಬಲಸಂವರ್ಧನೆಯೊಂದಿಗೆ ಅವರು ಹೆಚ್ಚು ವೃತ್ತಿಪರರಾಗುವಲ್ಲಿ ಸಹಕರಿಸುವುದು, ಶಿಕ್ಷಕರ ಜ್ಞಾನ ಮತ್ತು ಬೋಧನಾ ಕೌಶಲಗಳನ್ನು ವಿಸ್ತೃತಗೊಳಿಸುವುದು, ಶಿಕ್ಷಕರಲ್ಲಿ ಸೃಜನಶೀಲತೆ ಮತ್ತು ವೈಚಾರಿಕ ಮನೋಭಾವವನ್ನು ಉತ್ತಮಪಡಿಸುವುದು, ಬೋಧನೆ-ಕಲಿಕೆ ಪ್ರಕ್ರಿಯೆಯಲ್ಲಿ ಅಗತ್ಯ ಮಾರ್ಪಾಡುಗಳನ್ನು ತರುವುದು ಈ ಸೇವಾ ನಿರತ ತರಬೇತಿ ಕಾರ್ಯಕ್ರಮದ ಮುಖ್ಯ ಉದ್ದೇಶಗಳಾಗಿದ್ದು ಇವು ಫಲಕಾರಿಯಾಗುತ್ತಿದೆ.

3. ನಲಿಕಲಿ, ಚೈತನ್ಯ, ಬಹುಮುಖಿ, ಶಿಕ್ಷಣದಲ್ಲಿ ರಂಗಕಲೆ, ಪ್ರೇರಣ ಇವೆಲ್ಲವೂ ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಉತ್ತಮಪಡಿಸಲು ಉತ್ತಮ ತರಬೇತಿ ಕಾರ್ಯಕ್ರಮ.
4. ಇತ್ತೀಚಿಗೆ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಉಪಗ್ರಹ ಆಧಾರಿತ ದೂರಸಂಪರ್ಕದ ಮೂಲಕ ಪ್ರಸಾರವಾಗುತ್ತಿದ್ದು, ಕಳೆದ 2000 ರಿಂದ ಏಕಕಾಲದಲ್ಲಿ ಹೆಚ್ಚು ಹೆಚ್ಚು ಶಿಕ್ಷಕರನ್ನು ತರಬೇತಿಗೊಳಿಸಲು ಉಪಯುಕ್ತಕಾರಿ.
5. ಎಜುಸ್ಯಾಟ್, ಕೇಳಿ–ಕಲಿ, ಚಿಣ್ಣರ ಚುಕ್ಕಿ, ಚುಕ್ಕಿ ಚಿನ್ನ, ಮಾಹಿತಿ ಸಿಂಧು, ಆರ್.ಸಿ.ಪಿ, ಇಎಫ್.ಸಿ, ಐ.ಸಿ.ಟಿ ಇತ್ಯಾದಿ ಯೋಜನೆಗಳು ಕಾರ್ಯಕ್ರಮಗಳು ಮಕ್ಕಳಿಗೆ ತುಂಬ ಉಪಯುಕ್ತಕಾರಿಯಾಗಿದ್ದು, ನಮ್ಮಲಿ ಅಷ್ಟೇ ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದೆ.(ಎಜುಸ್ಯಾಟ್ ಕಾರ್ಯಕ್ರಮ ಬಿಟ್ಟು)
6. ರಾಜ್ಯದಲ್ಲಿ ಎಜುಸ್ಯಾಟ್ ಕಾರ್ಯಕ್ರಮ ಕೇವಲ ಚಾಮರಾಜನಗರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ ಪ್ರಸಾರವಾಗುತ್ತಿದ್ದು, ಎಲ್ಲ ಜಿಲ್ಲೆಗಳಲ್ಲೂ ಇದರ ಪ್ರಯೋಜನ ಮಕ್ಕಳಿಗೆ ಲಭ್ಯವಾದರೆ ತುಂಬ ಉಪಯುಕ್ತಕಾರಿ.
7. ಬಹುತೇಕ ಕಾರ್ಯಕ್ರಮಗಳು ಪರಿಣಾಮಕಾರಿಯಾಗಬೇಕಾದರೆ ಉತ್ತಮ ಸಂಘಟಣೆ ಮತ್ತು ಸಮನ್ವಯತೆ ಇರಬೇಕು. ಹಾಗೂ ಡಯಟ್ ಸಂಸ್ಥೆಯಲ್ಲಿ ಅಷ್ಟೇ ಪ್ರಮಾಣದಲ್ಲಿ ಹಿರಿಯ ಉಪನ್ಯಾಸಕರು/ಉಪನ್ಯಾಸಕರಿರಬೇಕು. ಆದರೆ ನಮ್ಮಲ್ಲಿ ಉಪನ್ಯಾಸಕರ ತೀವ್ರ ಕೊರತೆಯಿರುವುದು ಕಾರ್ಯಕ್ರಮದ ಯಶಸ್ವಿ ಅನುಷ್ಠಾನಕ್ಕೆ ಸ್ವಲ್ಪ ಹಿನ್ನೆಡೆ.
8. ತರಬೇತಿ ಕಾರ್ಯಕ್ರಮದ ಪೂರ್ವ ತಯಾರಿ, ಉತ್ತಮ ಯೋಜನೆ ಮತ್ತು ಶಾಲಾ ಹಂತದಲ್ಲಿ ಇದು ಎಷ್ಟರ ಮಟ್ಟಿಗೆ ತಲುಪಿದೆ ಎಂಬುದರ ಕುರಿತು ಅದರ ಅನುಪಾಲನೆ ತೀರಾ ಅಗತ್ಯ.
9. ಡಯಟ್ ಸಂಸ್ಥೆಯ ಹಿರಿಯ ಉಪನ್ಯಾಸಕ/ಉಪನ್ಯಾಸಕರನ್ನು ತಾಲೂಕುವಾರು ನೋಡಲ ಅಧಿಕಾರಿಯಾಗಿ ನಿಯೋಜಿಸಿ ಬ್ಲಾಕ್ ಹಂತದಲ್ಲಿ ಇದರ ಪರಿಶೀಲನೆ ಮಾಡಿ ನಂತರ ಜಿಲ್ಲಾ ಹಂತದಲ್ಲಿ ಪ್ರಗತಿ ಪರಿಶೀಲಿಸಿದರೆ ಉತ್ತಮ.
10. ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಾಲಾತಿ, ಸಾರ್ವತ್ರಿಕ ಹಾಜರಾತಿ ಮತ್ತು ಸಾರ್ವತ್ರಿಕ ಕಲಿಕೆ/ಸಾಧನೆಯ ದೃಷ್ಟಿಯಿಂದ ಈ ಎಲ್ಲ ಕಾರ್ಯಕ್ರಮಗಳು ಹೆಚ್ಚು ಫಲಕಾರಿ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**(3.)**

## LINKAGES – ACADEMIC

**1). ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಡಯಟ್ ಸಂಸ್ಥೆಯೊಂದಿಗೆ ಸಮನ್ವಯದೊಂದಿಗೆ ಹೇಗೆ ಕಾರ್ಯನಿರ್ವಹಿಸಬೇಕೆಂಬುದರ ಬಗ್ಗೆ ಸಹೋದ್ಯೋಗಿಗಳೊಂದಿಗೆ ಚರ್ಚಿಸಿದ ಅಂಶಗಳು.**
**ವಿವರ :**

ಡಯಟ್ ಹಾಗೂ ಬಿ.ಆರ್.ಸಿ ಪ್ರಾಥಮಿಕ ಶಿಕ್ಷಣದ ಶೈಕ್ಷಣಿಕ ಬೆಳವಣಿಗೆಗೆ ಪೂರಕವಾಗಿ ಇರುವ ಸಂಸ್ಥೆಗಳು.

1 ಡಯಟ್ ಸಂಸ್ಥೆಯ ಮಾರ್ಗದರ್ಶನದೊಂದಿಗೆ ಬಿ.ಆರ್.ಸಿ ಯವರು ಉತ್ತಮ ತರಬೇತಿ ಮಾಡ್ಯೂಲ್‌ಗಳನ್ನು ತಯಾರಿಸಿ ಉತ್ತಮವಾಗಿ ಸೇವಾ ನಿರತ ತರಬೇತಿಗಳನ್ನು ನೀಡಲು ಸಹಕಾರಿಯಾಗಬಹುದು. ಈ ಸಾಲಿನಲ್ಲಿ ತರಬೇತಿಗೊಳಪಡುವ ಶಿಕ್ಷರನ್ನು ಗಮನಿಸಿ ನಿಗದಿತ ಅವಧಿಯಲ್ಲಿ ತರಬೇತಿ ನೀಡಲು ಮೊದಲೇ ಕ್ರಿಯಾ ಯೋಜನೆಯನ್ನು ಕೈಗೊಳ್ಳಬೇಕು.

2. ಡಯಟ್‌ನ ಹಿರಿಯ ಉಪನ್ಯಾಸಕರು/ಉಪನ್ಯಾಸಕರು, ಬಿ.ಆರ್.ಪಿ ಸಿ.ಆರ್.ಪಿ ತಂಡ ರಚಿಸಿಕೊಂಡು ವಲಯಗಳ ಶಾಲೆಗಳಿಗೆ ಭೇಟಿ ನೀಡಿ ತರಬೇತಿಗಳ ಅನುಪಾಲನೆ ನಡೆಸಬೇಕು. ಆಗ ಬಿ.ಆರ್.ಸಿ ಮೂಲಕ ನೀಡಿದ ತರಬೇತಿಗಳು ನಿಜವಾಗಿಯೂ ಶಾಲಾ ಕೊಠಡಿಗಳಿಗೆ ತಲುಪಲು ಸಾಧ್ಯ. ಇಂತಹ ಭೇಟಿಗಳಲ್ಲಿ ಶಿಕ್ಷಕರು ಶೈಕ್ಷಣಿಕವಾಗಿ ಎದುರಿಸುವ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಳ್ಳಲು ಸಾಧ್ಯ.

3. ಡಯಟ್‌ನಿಂದ ಬಿ.ಆರ್.ಪಿ, ಸಿ.ಆರ್.ಪಿ, ಐ.ಇ.ಆರ್.ಟಿ, ಬಿ.ಇ.ಓ, ಬಿ.ಆರ್.ಸಿ.ಸಿ ಗಳಿಗೆ ಶೈಕ್ಷಣಿಕ ಸಬಲೀಕರಣಗೊಳಿಸಬಲ್ಲ ವಿಷಯಗಳ ತರಬೇತಿ, ವಿಚಾರಗೋಷ್ಠಿ, ಶೈಕ್ಷಣಿಕ ಅಧ್ಯಯನಗಳು ಹಮ್ಮಿಕೊಳ್ಳುವುದರಿಂದ ಬಿ.ಆರ್.ಸಿ ಫ್ಯಾಕಲ್ಟಿ ಅಪ್‌ಡೇಟ್ ಮಾಹಿತಿಗಳನ್ನು ಪಡೆದುಕೊಂಡು ತಮ್ಮ ವಲಯದಲ್ಲಿ ಶೈಕ್ಷಣಿಕ ನೀತಿಯನ್ನು ಸೃಷ್ಟಿಸಲು ಸಾಧ್ಯ ಹಾಗೂ ಗುಣಾತ್ಮಕ ಬದಲಾವಣೆಯನ್ನು ತರಲು ಸಾಧ್ಯ.

4. ಪ್ರತಿ ತಿಂಗಳು ಡಯಟ್/ಬಿ.ಆರ್.ಸಿ ಇವರ ಮಾಸಿಕ ಸಮಾಲೋಚನೆ ಸಭೆಗಳನ್ನು ಏರ್ಪಡಿಸಿ ಶೈಕ್ಷಣಿಕ ಚರ್ಚೆ ನಡೆಸಬೇಕು.

5. ಬಿ.ಆರ್.ಸಿ ಫ್ಯಾಕಲ್ಟಿ ಶೈಕ್ಷಣಿಕವಾಗಿ ತಮ್ಮ ತಮ್ಮ ವಲಯದಲ್ಲಿ ಬದಲಾವಣೆಗಳನ್ನು ತರಬೇಕಾದರೆ ಮೊದಲು ಬಿ.ಆರ್.ಸಿಸಿ, ಬಿ.ಆರ್.ಪಿ, ಸಿ.ಆರ್.ಪಿಗಳು ಬಿ.ಆರ್.ಸಿ ಯಲ್ಲಿ ನಿರಂತರ ಮಾಹಿತಿ ಸಂಗ್ರಹಣೆ, ಕ್ರೋಡೀಕರಣ, ವೇತನ, ಕ್ಯಾಶ್ ಬುಕ್ ನಿರ್ವಹಣೆ

ಜವಾಬ್ದಾರಿಯಿಂದ ಮುಕ್ತಗೊಳಿಸಿ ಕೇವಲ ಶೈಕ್ಷಣಿಕ ಚಿಂತನೆ ಹಾಗೂ ತರಬೇತಿಗಳು, ಶಾಲಾ ಭೇಟಿಗಳಿಗೆ ಮೀಸಲಾಗಿರಬೇಕು. ಆಗ ಮಾತ್ರ ಡಯಟ್ ಸಹಕಾರದೊಂದಿಗೆ ಬಿ.ಆರ್.ಸಿ ತಮ್ಮ ವಲಯದಲ್ಲಿ ಶೈಕ್ಷಣಿಕ ಅಭಿವೃದ್ಧಿ ಸಾಧಿಸಲು ಸಾಧ್ಯ,

೬. ಬಿಡುವಿನ ವೇಳೆಯಲ್ಲಿ ಶೈಕ್ಷಣಿಕವಾಗಿ ಅಗತ್ಯವಿರುವ ತರಬೇತಿಗಳನ್ನು ಬಿ.ಆರ್.ಸಿ ಯವರಿಗೆ ನೀಡಿ ಅವರನ್ನು ಸಬಲೀಕರಣಗೊಳಿಸುವುದು.

7. ಇತ್ತೀಚಿನ ಬೆಳವಣಿಗೆ ಹಾಗೂ ಪ್ರಚಲಿತ ವಿಚಾರಗಳನ್ನು ಬಿ.ಆರ್.ಸಿ ಯವರ ಗಮನಕ್ಕೆ ತಂದು ಬ್ಲಾಕ್ ಹಂತದಲ್ಲಿ ಅದರ ಪರಿಣಾಮಕಾರಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.

೮. ಬಿ.ಆರ್.ಸಿ ಯವರ ಶೈಕ್ಷಣಿಕ ವಿಚಾರಕ್ಕೆ ಸಂಬಂಧಿಸಿದಂತೆ ಡಯಟ್ ಹಂತದಲ್ಲಿ ಮಾಸಿಕ ಪ್ರಗತಿ ಪರಿಶೀಲನೆ ನಡೆಸಿ ಸೂಕ್ತ ಸಲಹೆ ನೀಡುವುದು.

೯. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟದ ಶಿಕ್ಷಣದ ದೃಷ್ಠಿಯಲ್ಲಿರುವ ಇರುವ ಇಲಾಖೆಯ ಯಾವುದೇ ಕಾರ್ಯಕ್ರಮವನ್ನು/ತರಬೇತಿಯನ್ನು ಸ್ಪಷ್ಠವಾಗಿ ಅರಿತು ಡಯಟ್‌ನ ಸಹಕಾರದೊಂದಿಗೆ ಬ್ಲಾಕ್ ಹಂತದಲ್ಲಿ ಬಿ.ಆರ್.ಪಿ–ಸಿ.ಎ.ಇ.ಓ–ಸಿ.ಆರ್.ಪಿ ಇವರ ಜತೆ ಉತ್ತಮ ಸಂಘಟಣೆ ಹೊಂದಿ ಶಾಲೆಗೆ ತಲುಪಿಸುವ ಕೌಶಲ ಹೊಂದಿರಬೇಕು.

೧೦. ಶಿಕ್ಷಕರ ಕೈಪಿಡಿಗಳು, ತರಬೇತಿ ಸಾಹಿತ್ಯ, ಶಿಕ್ಷಣ ವಾರ್ತೆ, ಪ್ರಾಥಮಿಕ ಶಾಲಾ ಶೈಕ್ಷಣಿಕ ಮಾರ್ಗದರ್ಶಿಕೆ ಇತ್ಯಾದಿ ಪುಸ್ತಕಗಳು ಶಾಲೆಯಲ್ಲಿ ಸದ್ಬಳಕೆ ಆಗುತ್ತಿದೆಯೇ ಎಂಬುದನ್ನು ಗಮನಿಸಬೇಕು.

11. ಸರಕಾರಿ ಆದೇಶ ಸುತ್ತೋಲೆಗಳನ್ನು ಕಾಲಕಾಲಕ್ಕೆ ಗಮನಿಸುತ್ತಾ ಸೂಕ್ತ ಕ್ರಮವನ್ನು ಕೈಗೊಳ್ಳಬೇಕು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**2). ನೀವು ಕ್ಷೇತ್ರ ಸಂಪನ್ಮೂಲ ಕೇಂದ್ರದ ಸಮನ್ವಯಾಧಿಕಾರಿಗಳೆಂದು ಊಹಿಸಿಕೊಳ್ಳಿ. ಕ್ಷೇತ್ರ ಸಂಪನ್ಮೂಲ ಕೇಂದ್ರದ ಕಾರ್ಯಗಳಿಗೆ ಸಂಬಂಧಿಸಿದಂತೆ ನೀವು ಡಯಟ್‌ನಿಂದ ನಿರೀಕ್ಷಿಸುವ ಮಾರ್ಗದರ್ಶನ ಹಾಗೂ ಪ್ರೋತ್ಸಾಹಗಳನ್ನು ಬರೆಯಿರಿ.**

**ವಿವರ** :

ಬಿ.ಆರ್.ಸಿ ಯವರು ಬ್ಲಾಕ್ ಹಂತದಲ್ಲಿ ಶೈಕ್ಷಣಿಕವಾಗಿ ಪ್ರಮುಖ ಪಾತ್ರ ವಹಿಸುತ್ತಾರೆ. ಈ ಹಿನ್ನೆಲೆಯಲ್ಲಿ ತಮ್ಮ ಬ್ಲಾಕಿನ ಪ್ರಾಥಮಿಕ ಶಾಲೆಗಳ ಕಲಿಕಾ ಗುಣಮಟ್ಟದ ಅಭಿವೃದ್ಧಿಗೆ ಖಚಿತವಾದ ದೂರದರ್ಶಿತ್ವವನ್ನು ಬಿ.ಆರ್.ಸಿ ಯವರು ಹೊಂದಿರತಕ್ಕದ್ದು.

1. ತರಬೇತಿಯ ಮಾಡ್ಯುಲ್ ತಯಾರಿಕೆ ಹಾಗೂ ಎಂ.ಆರ್.ಪಿ ಗಳನ್ನು ತಬೇತಿಗೊಳಸುವಲ್ಲಿ ಡಯಟ್‌ನ ಮಾರ್ಗದರ್ಶನ ಹಾಗೂ ಸಹಕಾರ

2. ಬಿ.ಆರ್.ಸಿ ವತಿಯಿಂದ ನೀಡಿದ ತರಬೇತಿಯ ಅನುಪಾಲನೆ ಡಯಟ್ ಅಧಿಕಾರಿಗಳಂದ/ ಉಪನ್ಯಾಸಕರಿಂದ ನಡೆಯಬೆಕು.

3. ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವ ಬಿ.ಆರ್.ಪಿ/ಸಿ.ಆರ್.ಪಿ ಗಳಗೆ ಡಯಟ್ ವತಿಯಿಂದ **ಪ್ರಶಸ್ತಿ/ಪುರಸ್ಕಾರ** ನೀಡುವ ಯೋಜನೆ ಇದ್ದರೆ ಒಳ್ಳೆಯದು.

4. ಪ್ರತಿ ತಿಂಗಳಗೊಮ್ಮೆ ಬಿ.ಆರ್.ಸಿ, ಬಿ.ಆರ್.ಪಿ, ಐ.ಇ.ಆರ್.ಟಿ ಮತ್ತು ಡಯಟ್ ಫ್ಯಾಕಲ್ಟಿ ಒಬ್ಬರ ಜತೆ ವಿಚಾರ ವಿನಿಮಯ ಹಾಗೂ ಶೈಕ್ಷಣಿಕ ಚಿಂತನೆ ನಡೆಸಿದರೆ ಉತ್ತಮ.

5. ಬಿ.ಆರ್.ಸಿ ವತಿಯಿಂದ ನಡೆಯುವ ತರಬೇತಿಗಳಗೆ ಹಾಗೂ ಸಮಾಲೋಚನಾ ಸಭೆಗಳಗೆ ಸಂಪನ್ಮೂಲ ವ್ಯಕ್ತಿಗಳಾಗಿ ಡಯಟ್ ಫ್ಯಾಕಲ್ಟಿ ಸದ್ಬಳಕೆ.

6. ಶಿಕ್ಷಕರ ಬೋಧನಾ ಸಾಮರ್ಥ್ಯವನ್ನು ಉತ್ತಮಪಡಿಸುವಲ್ಲಿ ಹಮ್ಮಿಕೊಳ್ಳುವ ವಿವಿಧ ತರಬೇತಿಗಳಗೆ ಕೈಗೊಳ್ಳುವ ಕ್ರಿಯಾ ಯೋಜನೆ ಬಗ್ಗೆ ಮೊದಲೇ ಮಾಹಿತಿಯನ್ನು ನೀಡಬೇಕು.

7. ವರ್ಷದಲ್ಲಿ ಕೈಗೊಳ್ಳುವ ಶೈಕ್ಷಣಿಕ ಚಟುವಟಿಕೆ ಬಗ್ಗೆ ಸಂಪೂರ್ಣ ಮಾಹಿತಿ ಹಾಗೂ ಕ್ರಿಯಾ ಯೋಜನೆಯನ್ನು ಕೈಗೊಳ್ಳುವ ಬಗ್ಗೆ ಸೂಕ್ತ ಸಲಹೆ ಸೂಚನೆ ತೀರಾ ಅಗತ್ಯ.

8. ತರಬೇತಿ ಎಷ್ಟರ ಮಟ್ಟಿಗೆ ಶಾಲಾ ಹಂತ ತಲುಪುತ್ತಿದೆ ಎಂಬುದರ ಬಗ್ಗೆ ಡಯಟ್ ಸಂಸ್ಥೆಯಿಂದ ನಿರಂತರ ಸಲಹೆ ಪ್ರೋತ್ಸಾಹ, ಮೇಲ್ವಿಚಾರಣೆ ಮತ್ತು ಮಾರ್ಗದರ್ಶನ ತೀರಾ ಅಗತ್ಯ.

9. ಬಿ.ಆರ್.ಸಿ ಮತ್ತು ಡಯಟ್ ಸಿಬ್ಬಂದಿಗಳ ಜತೆ ಉತ್ತಮ ಹೊದಾಣಿಕೆ ಇದ್ದು, ಬಿ.ಆರ್.ಸಿ ಸಿಬ್ಬಂದಿ ವರ್ಗಕ್ಕೆ ಡಯಟ್ ಸಿಬ್ಬಂದಿ ಉತ್ತಮ ಸ್ನೇಹಿತ, ತತ್ವಜ್ಞಾನಿ ಮತ್ತು ಸಲಹೆಗಾರರಾಗಿರಬೇಕು.

10. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಗುಣಮಟ್ಟ ಶಿಕ್ಷಣದ ದೃಷ್ಠಿಯಿಂದ ಡಯಟ್ ಹಮ್ಮಿಕೊಳ್ಳುವ ಎಲ್ಲಾ ಕಾರ್ಯಕ್ರಗಳು ಬ್ಲಾಕ್ ಹಂತದಲ್ಲಿ ಕಾರ್ಯರೂಪಕ್ಕೆ ಬರಬೇಕಾದರೆ ಡಯಟ್ ನ ಅಮೂಲ್ಯ ಸಲಹೆ ತೀರಾ ಅಗತ್ಯ.

11. ಇ–ಆಡಳತಕ್ಕೆ ಸಂಬಂಧಿಸಿದಂತೆ ಬೋಧನೆ ಮತ್ತು ತರಬೇತಿಯಲ್ಲಿ ತಂತ್ರಜ್ಞಾನದ ಬಳಕೆ ಇದರ ಬಗ್ಗೆ ಪರಿಪೂರ್ಣ ತರಬೇತಿ ಡಯಟ್ ಸಂಸ್ಥೆಯಿಂದ ಅವಶ್ಯಕ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**5. ಸಮೂಹ ಸಂಪನ್ಮೂಲ ವ್ಯಕ್ತಿಗಳು ಶೈಕ್ಷಣಿಕ ಚಟುವಟಿಕೆಗಳನ್ನು ಯಾವ ರೀತಿ ನಡೆಸಬೇಕೆಂದು ನೀವು ನಿರೀಕ್ಷಿಸುತ್ತೀರಿ?**

**ವಿವರ :**

ವಿದ್ಯಾರ್ಥಿಗಳಿಗೆ ಪ್ರೋತ್ಸಾಹದಾಯಕ ಸೌಲಭ್ಯಗಳು ಮತ್ತು ಗುಣಮಟ್ಟ ಶಿಕ್ಷಣ ನೀಡುವಲ್ಲಿ ಸಿ.ಆರ್.ಪಿ ಯವರು ಮುಖ್ಯವಾಗಿ

- **ಶೈಕ್ಷಣಿಕ ಕರ್ತವ್ಯಗಳು**
- **ಸಮುದಾಯ ಭಾಗಿತ್ವವನ್ನು ಖಾತ್ರಿಪಡಿಸಲು ಅನುವಾಗುವ ಜವಾಬ್ದಾರಿಗಳು**
- **ಸಾರ್ವತ್ರಿಕ ಧಾರಣ, ದಾಖಲೆ ಮತ್ತು ಅವಕಾಶಕ್ಕೆ ಸಂಬಂಧಿಸಿದ ಕರ್ತವ್ಯಗಳು**
- **ಯೋಜನೆ ಮತ್ತು ಅಂಕಿ ಅಂಶಗಳ ನಿರ್ವಹಣೆ ಕುರಿತು ಕರ್ತವ್ಯಗಳು**
- **ಉಸ್ತುವಾರಿ ಮತ್ತು ಸಮನ್ವಯದ ಕರ್ತವ್ಯಗಳನ್ನು ಹೊಂದ್ದು,**

1. ಮೊದಲು ಸಿ.ಆರ್.ಪಿ ಆದವರು ಶೈಕ್ಷಣಿಕ ಚಿಂತನೆಗಳಿಗೆ ಸ್ಪಂದಿಸುವ ಮನೋಭಾವವನ್ನು ಹೊಂದಿದವರಾಗಿರಬೇಕು.
2. ಹೊಸ ಚಿಂತನೆಗಳನ್ನು ಸ್ವಾಗತಿಸುವ ಹಾಗೂ ಕಾರ್ಯರೂಪಕ್ಕೆ ತರಲು ಸಮರ್ಥನಾಗಿರಬೇಕು.
3. ಕ್ಷೇತ್ರ ಸಮನ್ವಯಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಸಮೂಹ ಸಹಾಯಕ ಶಿಕ್ಷಣಾಧಿಕಾರಿಗಳು ಇವರೊಂದಿಗೆ ಉತ್ತಮ ಸಂಬಂಧ ಹೊಂದಾಣಿಕೆ ಇಟ್ಟುಕೊಂಡು ಇವರ ಮಾರ್ಗದರ್ಶನದಲ್ಲಿ ಕಾರ್ಯಪ್ರವೃತ್ತನಾಗಬೇಕು.
4. ಒಂದು ಕ್ಲಸ್ಟರ್‌ನ ಸಂಪೂರ್ಣ ಶೈಕ್ಷಣಿಕ ಅಭಿವೃದ್ಧಿ ಸಿ.ಆರ್.ಪಿ ಯ ಜವಾಬ್ದಾರಿಯಾಗಿರುತ್ತದೆ. ತಿಂಗಳಿಗೊಮ್ಮೆ ತಮ್ಮ ವಲಯದ ಶಾಲೆಗಳಿಗೆ ಭೇಟಿ ನೀಡಿ ಇಡೀ ದಿನ ಆ ಶಾಲೆಯ ಶೈಕ್ಷಣಿಕ ವಿಚಾರಗಳಿಗೆ ಸಮಯ ನೀಡಿ ಆ ಶಾಲೆಯ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ಹುಡುಕಿಕೊಡಬಲ್ಲ ಒಬ್ಬ ಸಮರ್ಥ ನಾಯಕನಂತೆ ಕಾರ್ಯಪ್ರವೃತ್ತನಾಗಿರಬೇಕು.
5. ಕ್ಲಸ್ಟರ್ ವ್ಯಾಪ್ತಿಯ ಶಾಲಾ ಶಿಕ್ಷಕರಿಗೆ ಶೈಕ್ಷಣಿಕ ಕಮ್ಮಟಗಳನ್ನು, ವಿಚಾರಗೋಷ್ಠಿಗಳನ್ನು ಏರ್ಪಡಿಸಲು ಸಾಮರ್ಥ್ಯ ಹೊಂದಿರಬೇಕು.
6. ಸಮಾಲೋಚನಾ ಸಭೆಗಳಲ್ಲಿ ಶಿಕ್ಷಕರ ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ನೀಡಬೇಕು ಹಾಗೂ ಪ್ರತಿಭಾನ್ವಿತ ಶಿಕ್ಷಕರಿಗೆ ಪ್ರೋತ್ಸಾಹ ನೀಡಬೇಕು.
7. ಶಿಕ್ಷಕರ ಬಲಸಂವರ್ಧನೆಯೊಂದಿಗೆ ಅವರು ಹೆಚ್ಚು ವೃತ್ತಿಪರರಾಗುವಲ್ಲಿ ಸಹಕರಿಸುವುದು ಹಾಗೂ ಶಿಕ್ಷಕರಲ್ಲಿ ಸೃಜನಶೀಲತೆ ಮತ್ತು ವೈಚಾರಿಕ ಮನೋಭಾವವನ್ನು ಉತ್ತಮಪಡಿಸುವ ದೃಷ್ಟಿಯಿಂದ ಕೈಗೊಳ್ಳುವ ವಿವಿಧ ತರಬೇತಿಗಳು ಕಡ್ಡಾಯವಾಗಿ ತಮ್ಮ ಸಮೂಹದ ಎಲ್ಲಾ ಶಿಕ್ಷಕರಿಗೆ ತಲುಪುವಂತೆ ಮತ್ತು ತರಬೇತಿಯ ಪರಿಣಾಮಕಾರಿ ಅನುಷ್ಠಾನದ ಬಗ್ಗೆ ಅನುಪಾಲನೆ ಮಾಡಬೇಕು.
8. ಶಾಲೆಗಳಲ್ಲಿ ಶೈಕ್ಷಣಿಕ ವಾರ್ಷಿಕ ಯೋಜನೆಯಂತೆ ಎಲ್ಲ ಕಾರ್ಯಕ್ರಮಗಳು ನಡೆಯುತ್ತಿವೆ ಎಂಬುದನ್ನು ಗಮನಿಸಬೇಕು.
9. ಶಾಲಾ ಸಂದರ್ಶನ ವೇಳೆಯಲ್ಲಿ ಅಧ್ಯಾಪಕರು ತಮ್ಮ ಶೈಕ್ಷಣಿಕ ಸಂದೇಹಗಳಿಗೆ/ ಕಲಿಕೆ–ಬೋಧನೋಪಕರಣಗಳ ಬಳಕೆ ಕುರಿತಂತೆ ಮಾಡುವ ವಿಚಾರ

ವಿನಿಮಯದಲ್ಲಿ ಯುಕ್ತವಾಗಿ ಸ್ಪಂದಿಸಿ ಮಾರ್ಗದರ್ಶನ ನೀಡುವುದು. ವಾರದಲ್ಲಿ ಕನಿಷ್ಠ 3, 4 ಬೋಧನಾ ಪ್ರಾತ್ಯಕ್ಷಿಕೆಯನ್ನು ನಿರ್ವಹಿಸುವುದು.

10. ಶಾಲಾ ಶಿಕ್ಷಣಕ್ಕೆ ಹೆಚ್ಚಿನ ಗಮನ ಕೊಟ್ಟು ಶೈಕ್ಷಣಿಕ ಕಾರ್ಯಕ್ರಮಗಳಾದ – ಬಾನುಲಿ/ದೂರದರ್ಶನ ಶೈಕ್ಷಣಿಕ ಕಾರ್ಯಕ್ರಮ, ಕಂಪ್ಯೂಟರ್ ಶಿಕ್ಷಣ, ಮುಂತಾದವು ಶಾಲಾ ಹಂತದಲ್ಲಿ ಅನುಷ್ಠಾನದ ಬಗ್ಗೆ ಪರಿಶೀಲಿಸಿ ಯುಕ್ತ ಮಾರ್ಗದರ್ಶನವನ್ನು ಶಾಲೆಗಳಿಗೆ ನೀಡುವುದು.
11. ಶಾಲೆಗಳಲ್ಲಿ ಕಲಿಕೋಪಕರಣ, ಗ್ರಂಥಾಲಯ ಪುಸ್ತಕ ಸದ್ಬಳಕೆಯಾಗುವಂತೆ ಗಮನಿಸಬೇಕು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**4. ಶಿಕ್ಷಣ ವ್ಯವಸ್ಥೆಗೆ ಸಂಬಂಧಿಸಿದಂತೆ ಒಬ್ಬ ಸಿ.ಆರ್.ಪಿಯಲ್ಲಿ ಇರಲೇಬೇಕಾದ ಅರ್ಹತೆಗಳೇನು?**

**ವಿವರ :**

1. ಕನಿಷ್ಠ ಪದವಿ ಹಾಗೂ ಬಿ.ಇಡಿ ತರಬೇತಿ ಹೊಂದಿರಬೇಕು.
2. ಶೈಕ್ಷಣಿಕ ಚಿಂತನೆಗಳಿಗೆ ತೆರೆದ ಮನೋಭಾವ ಹೊಂದಿದವನಾಗಿರಬೇಕು.
3. ಧನಾತ್ಮಕವಾಗಿ ಚಿಂತನೆಗೈವ ಮನೋಭಾವವಿರಬೇಕು.
4. ಪ್ರಾಯ ಚಿಕ್ಕದಾಗಿರಬೇಕು, ಒತ್ತಡಗಳನ್ನು ಸಹಿಸುವ ಶಕ್ತಿ ಇರಬೇಕು.
5. ಯಾವುದೇ ವಿಷಯವನ್ನು ಸಕಾರಾತ್ಮಕವಾಗಿ ವಿಶ್ಲೇಷಿಸುವ ಮನೋಧರ್ಮ ಹೊಂದಿರಬೇಕು.
6. ವೇಗವಾಗಿ ಕೆಲಸಗಳನ್ನು ನಿಭಾಯಿಸುವ ಕ್ಷಮತೆ ಹೊಂದಿರಬೆಕು.
7. ಮಾಹಿತಿ ಸಂಗ್ರಹಣೆ ಹಾಗೂ ಬೇಕಾದಾಗ ಹೇಗೆ ಬೇಕೋ ಹಾಗೆ ಅದನ್ನು ಪರಿಷ್ಕರಣೆ ಮಾಡಿ ನೀಡುವ ಚಾಣಾಕ್ಷತನ ಹೊಂದಿರಬೇಕು.
8. ವಿಷಯ ಪಾಂಡಿತ್ಯವನ್ನು ಕಡ್ಡಾಯವಾಗಿ ಹೊಂದಿರಬೇಕು.
9. ಎಲ್ಲಕ್ಕಿಂತ ಮಿಗಿಲಾಗಿ ಉತ್ತಮ ಸಂಘಟನಾಕಾರನಾಗಿರಬೇಕು.
10. ಸಾಕಷ್ಟು ಇಲಾಖಾ ಹಾಗೂ ಇಲಾಖೆಯೇತರ ಹಾಗೂ ಸಮಾಜದಲ್ಲಿ ಮಾನವ ಸಹಜ ಬಾಂಧವ್ಯವನ್ನು ಹೊಂದಿರುವ ಉತ್ತಮ ವ್ಯಕ್ತಿಯಾಗಿರಬೇಕು.
11. ಅಧಿಕಾರ ಹಾಗೂ ಹಣದ ಆಸೆ ಇರಬಾರದು.
13. ಅವನು ಸ್ನೇಹಿತ, ತತ್ವಜ್ಞಾನಿ ಹಾಗೂ ಉತ್ತಮ ಮಾರ್ಗದರ್ಶಕನಾಗಿರಬೇಕು.
14. ಶೈಕ್ಷಣಿಕ ಹಾಗೂ ಅಂಕಿ ಅಂಶಗಳ ಮಾಹಿತಿ ತಕ್ಷಣ ಹೇಳುವಂತಿರಬೇಕು.
15. ಸಮೂಹ ಮಾಧ್ಯಮಗಳನ್ನು ಪರಿಪೂರ್ಣವಾಗಿ ಉಪಯೋಗಿಸಿಕೊಳ್ಳುವ ಪ್ರಭುತ್ವವಿರಬೇಕು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

**೫. ಎಂತಹ ವ್ಯಕ್ತಿ ಒಬ್ಬ ಉತ್ತಮ ಸಿ.ಆರ್.ಪಿಯಾಗಿ ಕಾರ್ಯನಿರ್ವಹಿಸಬಹುದು?**
**ವಿವರ ;**

ಸರ್ಕಾರದ ಯೋಜನೆಗಳನ್ನು ಶಾಲೆಗಳಲ್ಲಿ ಸಮುದಾಯದ ಸಹಭಾಗಿತ್ವದಲ್ಲಿ ಅನುಷ್ಠಾನಗೊಳಿಸಿ ಶಿಕ್ಷಕನಾಗಿ, ಮಾರ್ಗದರ್ಶಕನಾಗಿ, ಶಾಲೆ, ಸಮುದಾಯ,ಎಸ್.ಡಿ.ಎಂ.ಸಿ.ಗಳೊಂದಿಗೆ ಸಮನ್ವಯ ಸಾಧಿಸಿ ಶಾಲೆಗಳ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುವ ಮತ್ತು ಪ್ರಾಥಮಿಕ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಹೊಣೆ ಹೊತ್ತು, ದಕ್ಷ ನಾಯಕನಾಗಿ, ಸಹೃದಯಿಯಾಗಿ,ಸಲಹೆಗಾರನಾಗಿ ಕಾರ್ಯ ನಿರ್ವಹಿಸಬಲ್ಲ ಶೈಕ್ಷಣಿಕ ಪ್ರತಿನಿಧಿಯೇ ಸಮೂಹ ಸಂಪನ್ಮೂಲ ವ್ಯಕ್ತಿ.

ಒಬ್ಬ ಆದರ್ಶ ಸಿ.ಆರ್.ಪಿ. ಹೊಂದಿರಬೇಕಾದ ಕೆಲವು ಮಹತ್ವದ ಗುಣಗಳೆಂದರೆ:

- ❖ ಮಾರ್ಗದರ್ಶಕ ವ್ಯಕ್ತಿತ್ವ
- ❖ ಉತ್ತಮ ಯೋಜನಾ/ಆಯೋಜನಾ ಸಾಮರ್ಥ್ಯ
- ❖ ತನ್ನ ಕಾರ್ಯಗಳ ಬಗ್ಗೆ ಸ್ವವಿಮರ್ಶೆ/ಆತ್ಮಾವಲೋಕನ ಮಾಡಿಕೊಳ್ಳುವುದು.
- ❖ ಸ್ನೇಹಮಯ ವ್ಯಕ್ತಿತ್ವ.
- ❖ ಸಮುದಾಯದೊಂದಿಗೆ ಉತ್ತಮ ಭಾಂದವ್ಯ.
- ❖ ಶಾಲೆ/ಶಿಕ್ಷಕರ ಬಗ್ಗೆ ಪೂರ್ವಾಗ್ರಹಪೀಡಿತರಾಗಿಲ್ಲದಿರುವುದು.
- ❖ ಸಂಪನ್ಮೂಲ ವ್ಯಕ್ತೊಗಳು/ಶಿಕ್ಷಕರಿಗೆ ಸ್ಪಂದಿಸುವಚಿತಹ ಸಕಾರಾತ್ಮಕ ಮನೋಭಾವ
- ❖ ತರಬೇತುದಾರರಾಗಿ ಭಾಷೆಯ ಸ್ಪಷ್ಟತೆ, ಸಂಯಮ ಮತ್ತು ತಾಳ್ಮೆ, ತಮ್ಮ ಅಭಿಪ್ರಾಯವನ್ನು ಒಪ್ಪುವಂತೆ ಮಾಡುವ ಸಾಮರ್ಥ್ಯ.

ಒಟ್ಟಾರೆ ಸಂಪನ್ಮೂಲ ವ್ಯಕ್ತಿಯು ತನ್ನ ವ್ಯಾಪ್ತಿಯ ಶಾಲೆಗಳ ಶಿಕ್ಷಕರ, ವಿದ್ಯಾರ್ಥಿಗಳ ಹಾಗೂ ಸಮುದಾಯದ ಕೇಂದ್ರ ಬಿಂದುವಾಗಿದ್ದು ಸ್ನೇಹಿತ ತತ್ವಜ್ಞಾನಿ, ಮಾರ್ಗದರ್ಶಿಯಾಗಿದ್ದುಕೊಂಡು, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳ ರೂವಾರಿಯಾಗಿ, ಸಂಶೋಧಕರಾಗಿ, ಶೈಕ್ಷಣಿಕ ಸಲಹೆಗಾರರಾಗಿ, ಸಂಪನ್ಮೂಲ ಕ್ರೋಢೀಕರಣ ಮಾಡುತ್ತಾ, ತನ್ನ ವ್ಯಾಪ್ತಿಯ ಅರ್ಹ ಮಕ್ಕಳು ಶಾಲೆಗೆ ದಾಖಲಾಗುವಂತೆ, ದಾಖಲಾದ ಎಲ್ಲಾ ಮಕ್ಕಳು ಕನಿಷ್ಠ ೮ನೇ ತರಗತಿಯವರೆಗೆ ನಿರೀಕ್ಷಿತ ಮಟ್ಟದಲ್ಲಿ ಕಲಿಕೆಯನ್ನು ಸಾಧಿಸುವಂತೆ ಮಾಡಲು, ಸಮುದಾಯ, ಇಲಾಖೆ ಹಾಗೂ ಶಾಲೆಗಳಿಗೆ ಸಂಪರ್ಕ ಕಲ್ಪಿಸುವಂತೆ ಮಾಡುವ ಪ್ರವಾದಿಯಾಗಿರಬೇಕು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

(4.)

## LINKAGES – ADMINISTRATIVE

**ನೀವು ನಿಮ್ಮ ಡಯಟ್ ಸಂಸ್ಥೆಯಲ್ಲಿ ಸಿ.ಎ.ಸಿ.ಯ ನೋಡಲ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸಿರಬಹುದು ಅಥವಾ ಸಿ.ಎ.ಸಿಯ ಇತರ ಕೆಲಸಗಳನ್ನು ನಿರ್ವಹಿಸಿರಬಹುದು.**

**1. ಸಿ.ಎ.ಸಿ ಕೆಲಸಗಳನ್ನು ನಿರ್ವಹಿಸುವಾಗ ನಿಮಗಾದ ಅನುಭವಗಳನ್ನು ಬರೆಯಿರಿ.**

**ವಿವರ** :

1. ಸಿ.ಎ.ಸಿ ರಾಜ್ಯ ಮಟ್ಟದಲ್ಲಿ ಡಿ.ಇಡಿ ಮತ್ತು ಬಿ.ಇಡಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯನ್ನು ನೋಡಿಕೊಳ್ಳುತ್ತಿದ್ದು, ಆಯ್ಕೆ ಪ್ರಕ್ರಿಯೆಯಲ್ಲಿ ನಿಯಮದಂತೆ ಡಿ.ಇಡಿ ವ್ಯಾಸಂಗಕ್ಕೆ ಅಭ್ಯರ್ಥಿಗಳಿಗೆ ನಿಗದಿತ ನಮೂನೆಯ ಅರ್ಜಿಯನ್ನು ವಿತರಿಸಿರುತ್ತೇನೆ. ಈ ಸಂದರ್ಭದಲ್ಲಿ ನಿಗದಿತ ಅರ್ಜಿಯನ್ನು (ಒ.ಎಮ್.ಆರ್ ಶೀಟ್)ನ್ನು ತಪ್ಪಿಲ್ಲದೇ ಭರ್ತಿ ಮಾಡಲು, ಅರ್ಜಿ ಸ್ವೀಕರಿಸಲು ಬಂದ ಅಭ್ಯರ್ಥಿಗಳಿಗೆ **'ಹೆಲ್ಪ್ ಡೆಸ್ಕ್'** ಮುಖ್ಯಸ್ಥನಾಗಿ ಮೊದಲು ಅರ್ಜಿ ಪುಸ್ತಕದ ಮಾಹಿತಿಯನ್ನು ಸರಿಯಾಗಿ ಓದಿ, ವಿದ್ಯಾರ್ಹತೆಯ ಸೂಕ್ತ ದಾಖಲೆಯಲ್ಲಿದ್ದಂತೆ ಅರ್ಜಿಯನ್ನು ಭರ್ತಿ ಮಾಡಲು ಸೂಕ್ತ ಮಾಹಿತಿ ನೀಡಿರುತ್ತೇನೆ.

2. ಡಿ.ಇಡಿ ಯ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸಿರುವುದಿಲ್ಲ. ಆದ್ದರಿಂದ ಅರ್ಜಿಯನ್ನು ವಿತರಿಸುವ ಹಾಗೂ ಪರಿಶೀಲಿಸುವ ಕಾರ್ಯ ನಿರ್ವಹಿಸಿರುತ್ತೇನೆ. ಈ ಸಂದರ್ಭದಲ್ಲಿ ಅಭ್ಯರ್ಥಿಗಳು ಪುಸ್ತಕದ ಮಾಹಿತಿಯನ್ನು ಸರಿಯಾಗಿ ಓದದೇ ತಪ್ಪು ತಪ್ಪಾಗಿ **ಒ.ಎಂ.ಆರ್**. **ಶೀಟ್**ನ್ನು ಭರ್ತಿ ಮಾಡುವುದು ನಂತರ ತಿದ್ದುಪಡಿ ಮಾಡುವುದು ಗಮನಿಸಿದ್ದೇನೆ.

ಸಿ.ಎ.ಸಿ ಯು ಅಭ್ಯರ್ಥಿಗಳನ್ನು ಆಯ್ಕೆ ಮಾಡುವ ಸಂದರ್ಭದಲ್ಲಿ ಆಯ್ಕೆ ಪ್ರಕ್ರಿಯೆಯು ನನಗೆ ತುಂಬಾ ಉತ್ತಮವೆನಿಸಿತು. ಯಾಕೆಂದರೆ ಅರ್ಜಿ ಬೆಲೆ ತೃಪ್ತಿಕರ. ಹಾಗೆಯೇ ಮೊದಲು ಕೇವಲ **ಓ.ಎಂ.ಆರ್ ಶೀಟ್** ಮಾತ್ರ ವಿನಃ ಅನವಶ್ಯಕ ಯಾವುದೇ ಇತರೇ ದಾಖಲೆ ಪ್ರತಿ – ಕಾಗದ ಪ್ರತಿ ಇಲ್ಲ. ಇದು ಅಭ್ಯರ್ಥಿಗಳಿಗೆ ತುಂಬ ಅನುಕೂಲಕಾರಿ.

3. ಮೂರನೇ ಹಂತದಲ್ಲಿ ಪ್ರಾರಂಭಿಕ ಪಟ್ಟಿಯಲ್ಲಿ ಅಭ್ಯರ್ಥಿಗಳು ಆಯ್ಕೆಯಾದ ಮೇಲೆ ದಾಖಲೆ ಪತ್ರಗಳನ್ನು ಪರಿಶೀಲಿಸಿ ಪಡೆಯುವ ಕಾರ್ಯನಿರ್ವಹಿಸಿದ್ದು, ಇಲ್ಲೂ ಸೂಕ್ತ ದಾಖಲೆಯನ್ನು ಸಲ್ಲಿಸಲು ತೊಂದರೆ – ಗೊಂದಲ ಉಂಟಾಗಿದ್ದು ಅನಿಸುತ್ತದೆ. ಈ ಸಂದರ್ಭದಲ್ಲಿ ಅಭ್ಯರ್ಥಿಗಳಿಗೆ ಸಲಹೆ ನೀಡಿರುತ್ತೇನೆ.

ಒಟ್ಟಾರೆ ಡಯಟ್ ಪ್ರಾಂಶುಪಾಲರು ಹಾಗೂ ಡಿ.ಇಡಿ ಪ್ರಕ್ರಿಯೆಯ ನೋಡಲ್ ಅಧಿಕಾರಿಯ ಮಾರ್ಗದರ್ಶನದ ಮೂಲಕ ಈ ಕಾರ್ಯ/ಅನುಭವ ಉತ್ತಮವೆನಿಸಿದೆ. ಮಿಗಿಲಾಗಿ ಡಿ.ಇಡಿ ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಇರುವ ವ್ಯವಸ್ಥೆ/ಹಂತಗಳು ನಿಜಕ್ಕೂ ಉತ್ತಮವಾಗಿದೆ. ಬಹಳ ವರ್ಷಗಳ ಹಿಂದೆ ಆಯ್ಕೆ ಪ್ರಕ್ರಿಯೆ ಕೇವಲ ಒಂದು ಸಂಸ್ಥೆಗೆ ಸೀಮಿತವಾಗಿದ್ದು, ಸಿ.ಎ.ಸಿ ಮೂಲಕ ರಾಜ್ಯಾದ್ಯಂತ ಏಕಕಾಲದಲ್ಲಿ ಆಯ್ಕೆ ಪ್ರಕ್ರಿಯೆ ನಡೆಯುತ್ತಿರುವುದು ಉತ್ತಮ. ಆಯ್ಕೆಯಲ್ಲಿ ಪಾರದರ್ಶಕತೆ/ಸೂಕ್ಷ್ಮತೆ ಇದೆ. ಅಷ್ಟೇ ಅಲ್ಲ ಅಭ್ಯರ್ಥಿಗಳ ಅರ್ಹತೆಗೆ ಮಹತ್ವ ನೀಡುತ್ತಿದೆ.

ಆದರೆ ಶೈಕ್ಷಣಿಕ ವರ್ಷ ಸ್ವಲ್ಪ ಅಂದರೆ ಒಂದೆರಡು ತಿಂಗಳು ವಿಳಂಬವಾಗುತ್ತಿರುವುದು ಕಂಡುಬರುತ್ತಿದೆ. ಸ್ವಲ್ಪ ಬೇಗ ಆಯ್ಕೆ ಪ್ರಕ್ರಿಯೆ ಪ್ರಾರಂಭವಾದರೆ ಶೈಕ್ಷಣಿಕ ವರ್ಷ ಬೇಗ ಪ್ರಾರಂಭವಾಗಲಿಕ್ಕೆ ಸಾಧ್ಯತೆ ಇದೆ. ಇದು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಒಳ್ಳೆಯದು. ವಿದ್ಯಾರ್ಥಿಗಳ ಗೊಂದಲ ನಿವಾರಿಸುತ್ತದೆ.

**2. ಸಿ.ಎ.ಸಿ ಕಾರ್ಯಗಳನ್ನು ನಿರ್ವಹಿಸುವಾಗ ನಿಮಗೆ ಯಾವುದಾದರೂ ಸಮಸ್ಯೆಗಳು/ಕಷ್ಟಗಳು ಎದುರಾಗಿವೆಯೇ? ನೀವು ಅವುಗಳನ್ನು ಹೇಗೆ ನಿಭಾಯಿಸಿದಿರಿ?**

**ವಿವರ** :

ಇಲ್ಲ ಸಿ.ಎ.ಸಿ ಯ ಡಿ.ಇಡಿ ಆಯ್ಕೆ ಪ್ರಕ್ರಿಯೆಯ ನೋಡಲ್ ಅಧಿಕಾರಿಯಾಗಿ ಕಾರ್ಯನಿರ್ವಹಿಸದ ಕಾರಣ ಯಾವುದೇ ಅಂತಹ ಸಮಸ್ಯೆಗಳು ಎದುರಾಗಿಲ್ಲ.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

## (5).

### LINKAGES - NON GOVERNMENTAL ORGANISATIONS

Visit the following web site, select any two NGOs listed and prepare a brief write-up for orienting the teachers on the activities of the NGO concerned http://www.ngo.org/links/index.htm#anchor81099

### NGO 1: Velored

### ಗುಣಮಟ್ಟದ ಶಿಕ್ಷಣಕ್ಕಾಗಿ ಇಲಾಖೆಯ ಸಹಭಾಗಿತ್ವದಲ್ಲಿ ನಡೆಸಿದ ಕಾರ್ಯಕ್ರಮಗಳು

ಪ್ರಾಥಮಿಕ ಶಾಲೆಗಳಲ್ಲಿ ಸಮುದಾಯ ಭಾಗವಹಿಸುವಿಕೆ ಹೆಚ್ಚಿದಾಗ ಮಾತ್ರ ಸಮಾಜದಲ್ಲಿ ಮಕ್ಕಳ ಪರವಾಗಿ ವಾತಾವರಣ ಮೂಡುತ್ತದೆ ಎಂಬ ಅಂಶಕ್ಕೆ ಒತ್ತು ನೀಡುತ್ತಾ ಪಡಿ ಕಳೆದ ಹಲವಾರು ವರ್ಷಗಳಿಂದ ವೆಲೊರೆಡ್ ಪರಿಕಲ್ಪನೆಯೊಂದಿಗೆ ಗುಣಮಟ್ಟದ ಶಿಕ್ಷಣಕ್ಕಾಗಿ ಹಾಗೂ ಮಕ್ಕಳ ಹಕ್ಕುಗಳ ರಕ್ಷಣೆಯ ನಿಟ್ಟಿನಲ್ಲಿ ದ.ಕ. ಹಾಗೂ ಉಡುಪಿ ಜಿಲ್ಲೆಯಾದ್ಯಂತ ಕಾರ್ಯಪ್ರವೃತ್ತವಾಗಿದೆ.

ಶಿಕ್ಷಣ ಸಂಪನ್ಮೂಲ ಕೇಂದ್ರವು ಶಿಕ್ಷಕರು, ಪೋಷಕರು, ಶಿಕ್ಷಣಾಸಕ್ತರ ವೇದಿಕೆಯಾಗಿದ್ದು ಪ್ರತೀ ತಾಲೂಕಿನಲ್ಲಿ ಶಿಕ್ಷಣದ ಅಲೆಯನ್ನು ಎಬ್ಬಿಸುವ ಆಶಯದೊಂದಿಗೆ ಪ್ರತೀ ತಾಲೂಕು ಹಾಗೂ ಜಿಲ್ಲಾ ಮಟ್ಟದಲ್ಲಿ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಸಮುದಾಯದಲ್ಲಿ ಶಿಕ್ಷಣಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡುವ ಹಾಗೂ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಖಾತ್ರಿ ಪಡಿಸಲು, ಸರ್ವ ಶಿಕ್ಷಣ ಅಭಿಯಾನದ ಮುಖಾಂತರ ಸರಕಾರ ನಡೆಸುತ್ತಿರುವ ಪ್ರಯತ್ನಕ್ಕೆ ಕೈಗೂಡಿಸಲು ಜನರನ್ನು ಸಂಘಟಿಸುವ ಪ್ರಯತ್ನವಾಗಿ ಕಾರ್ಯನಿರ್ವಹಿಸುತ್ತವೆ.

ಪಡಿ, ವೆಲೊರೆಡ್, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮುಖಾಂತರ 2007-2008ರ ಸಾಲಿನಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಈ ಕೆಳಗಿನಂತಿದೆ.

**ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005** : ಶಿಕ್ಷಕರು ಎನ್.ಸಿ.ಎಫ್. ಬಗ್ಗೆ ತಿಳಿದುಕೊಂಡು ಅದರ ಆಶಯಗಳನ್ನು ತರಗತಿಯಲ್ಲಿ ಅಳವಡಿಸಬೇಕೆಂಬ ಆಶಯದೊಂದಿಗೆ ಸಾರ್ವಜನಿಕ ಶಿಕ್ಷಣ ಇಲಾಖೆ, ಡಯಟ್ ಮಂಗಳೂರು ಇವರ ಸಹಭಾಗಿತ್ವದಲ್ಲಿ ಜಿಲ್ಲಾ ಮಟ್ಟದಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ದ.ಕ.ಜಿಲ್ಲೆಯ ಎಲ್ಲಾ ತಾಲೂಕಿನ ಶಿಕ್ಷಕರುಗಳು ಕಾರ್ಯಾಗಾರದಲ್ಲಿ ಭಾಗವಹಿಸಿ ಮಾಹಿತಿಯನ್ನು ಪಡೆದಿರುತ್ತಾರೆ. ಜಿಲ್ಲಾ ಮಟ್ಟದಲ್ಲಿ ಮಂಗಳೂರು ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗಿತ್ತು ಹಾಗೂ ತಾಲೂಕು ಮಟ್ಟದಲ್ಲಿ ಅನುಸರಣಾ ಕಾರ್ಯಗಾರಗಳು ನಡೆದಿರುತ್ತದೆ. ಅಲ್ಲದೆ ಆಸಕ್ತ ಶಿಕ್ಷಕರಿಗೆ ಬೆಳ್ತಂಗಡಿ ತಾಲೂಕಿನಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಕಾರ್ಯಗಾರ ಆಯೋಜಿಸಲಾಗಿದೆ.

**ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ (ಎಸ್.ಡಿ.ಎಂ.ಸಿ.) ಸಮಿತಿ ಸದಸ್ಯರುಗಳಿಗೆ ತರಬೇತಿ:** ಇಲಾಖೆಯ ಸಹಭಾಗಿತ್ವದೊಂದಿಗೆ ದ.ಕ.ಜಿಲ್ಲೆಯಲ್ಲಿ ವೆಲೊರೆಡ್, ಶಿಕ್ಷಣ ಸಂಪನ್ಮೂಲ ಕೇಂದ್ರಗಳ ವತಿಯಿಂದ ಮಂಗಳೂರು, ಬಂಟ್ವಾಳ, ಪುತ್ತೂರು, ಬೆಳ್ತಂಗಡಿ, ಸುಳ್ಯ ಹಾಗೂ ಮೂಡಬಿದ್ರೆ ತಾಲೂಕುಗಳಲ್ಲಿ ತರಬೇತಿಯನ್ನು ನಡೆಸಲಾಗಿದೆ. 2004 ರಿಂದ 2007ರವರೆಗಿನ ತರಬೇತಿಯನ್ನು ವೆಲೊರೆಡ್ ವತಿಯಿಂದ ಆಯೋಜಿಸಲಾಗಿತ್ತು.

**REMS** : ಜಿಲ್ಲಾ ಮಟ್ಟದಲ್ಲಿ ನಡೆಯುವ REMS ಸಭೆಗಳಲ್ಲಿ ವೆಲೊರೆಡ್ ಸಂಸ್ಥೆಯು ನಿರಂತರವಾಗಿ ತೊಡಗಿಕೊಂಡಿದೆ. ತಾಲೂಕು ಮಟ್ಟದಲ್ಲಿ ನಡೆಯುವ REMS (ಬಂಟ್ವಾಳ, ಮಂಗಳೂರು, ಪುತ್ತೂರು) ವೆಲೊರೆಡ್ ತೊಡಗಿಕೊಂಡಿದೆ.

**School Assessment** : ಗುಣಮಟ್ಟದ ಶಿಕ್ಷಣ ಜಿಲ್ಲಾ ಮಟ್ಟದ ಮೌಲ್ಯಮಾಪನ ತಂಡದಲ್ಲಿ ವೆಲೊರೆಡ್ ಒಂದಾಗಿದ್ದು, ಮೌಲ್ಯ ಮಾಪನ (School Assessment)ನಲ್ಲಿ ನಿರಂತರವಾಗಿ ತೊಡಗಿಕೊಂಡಿರುತ್ತದೆ.
**ಎಸ್.ಡಿ.ಎಂ.ಸಿ. ತರಬೇತಿ :** ಎಸ್.ಡಿ.ಎಂ.ಸಿ. ತರಬೇತಿಗಾಗಿ ಇಲಾಖಾವತಿಯಿಂದಲೇ ರಾಜ್ಯ ಸಂಪನ್ಮೂಲ ತಂಡವಾಗಿ ವೆಲೊರೆಡ್ ಗುರುತಿಸಿಕೊಂಡಿದೆ.

**ಜಿಲ್ಲಾ ಅನುಷ್ಠಾನ ಸಮಿತಿ** : ಸರ್ವ ಶಿಕ್ಷಣ ಅಭಿಯಾನ, ಜಿಲ್ಲಾ ಹಂತದ ಯೋಜನೆ ಅನುಷ್ಠಾನ ಸಮಾಲೋಚನಾ ಪ್ರಕ್ರಿಯೆಯಲ್ಲಿಯೂ ವೆಲೊರೆಡ್ ತೊಡಗಿಕೊಂಡಿದೆ.

**MHRD ಅಧ್ಯಯನ :** ಶಾಲೆಗಳ ಸರ್ವತೋಮುಖ ಅಭಿವೃದ್ಧಿ ಕುರಿತು ಮಾನವ ಸಂಪನ್ಮೂಲ ವಿಕಾಸ ಸಚಿವಾಲಯವು ಇಲಾಖೆಯ ಸಹಭಾಗಿತ್ವದೊಂದಿಗೆ ಮಂಗಳೂರು, ಬಂಟ್ವಾಳ, ಬೆಳ್ತಂಗಡಿ ತಾಲೂಕಿನ ಆಯ್ದ ಶಾಲೆಗಳಲ್ಲಿ ಅಧ್ಯಯನ ನಡೆಸಲಾಗಿತ್ತು. ಈ ಅಧ್ಯಯನದಲ್ಲಿ ವೆಲೊರೆಡ್ ತೊಡಗಿಕೊಂಡಿದ್ದು ಶಾಲೆಗಳ ಸರ್ವತೋಮುಖ ಅಭಿವೃದ್ಧಿಯ ಕುರಿತು ಅಧ್ಯಯನ ನಡೆಸಲಾಗಿದೆ.

**ಕಲಿಕಾ ಬೋಧನೆ / ಪರಿಹಾರ ಬೋಧನೆ :** ಅಕ್ಷರ ಫೌಂಡೇಶನ್ ಬೆಂಗಳೂರು ಹಾಗೂ ಶಿಕ್ಷಣ ಇಲಾಖೆಯ ವತಿಯಿಂದ 'ಕಲಿಕಾ ಆಂದೋಲನ ಕಾರ್ಯಕ್ರಮ' ಅನುಷ್ಟಾನದ ಸಹಜ ಸ್ಥಿತಿಯ ಅಧ್ಯಯನವನ್ನು ಬಂಟ್ವಾಳ, ಮಂಗಳೂರು, ಪುತ್ತೂರು ತಾಲೂಕಿನಲ್ಲಿ ಹಮ್ಮಿಕೊಳ್ಳಲಾಗಿದೆ.

**ಪ್ರಾಥಮಿಕ ಶಿಕ್ಷಣ ಅವಕಾಶ ಕುರಿತು ಜಾಥಾ** : ಪ್ರಾಥಮಿಕ ಶಿಕ್ಷಣ ಅವಕಾಶಗಳ ಕುರಿತು, ಮಕ್ಕಳು ಅರ್ಧದಲ್ಲಿಯೇ ಶಾಲೆ ತ್ಯಜಿಸುವುದನ್ನು ಕಡಿಮೆಯಾಗುವುದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆಧ್ಯತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಮಕ್ಕಳ ದಾಖಲಾತಿಗೆ ಹೆಚ್ಚಿನ ಅಧ್ಯತೆಯನ್ನು ನೀಡಿ ಅರಿವು ಮೂಡಿಸುವ ಉದ್ದೇಶದಿಂದ ಶೈಕ್ಷಣಿಕ ಜಾಥಾವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮಂಗಳೂರು ತಾಲೂಕು ಇವರ ಸಹಭಾಗಿತ್ವದೊಂದಿಗೆ ಮಂಗಳೂರು ತಾಲೂಕಿನ ಉಳ್ಳಾಲ, ಗಂಜಿಮಠ, ಗುರುಪುರ, ಸುರತ್ಕಲ್, ಮುಲ್ಕಿ ವ್ಯಾಪ್ತಿಯಲ್ಲಿ ಹಮ್ಮಿಕೊಂಡು ಶೈಕ್ಷಣಿಕ ಜಾಗೃತಿ ಮೂಡಿಸಲಾಗಿದೆ.

**ಕಲಿಕೋಪಕರಣ ತಯಾರಿ ತರಬೇತಿ :** ಡಯಟ್ ಮಂಗಳೂರು ಹಾಗೂ ವೆಲೊರೆಡ್ ಸಂಸ್ಥೆಯ ಸಹಭಾಗಿತ್ವದಲ್ಲಿ ಮುಲ್ಕಿಯಲ್ಲಿ ಡಿ.ಎಡ್. ವಿದ್ಯಾರ್ಥಿಗಳಿಗೆ, ಡಿ.ಎಡ್. ಶಿಕ್ಷಕರಿಗೆ 2 ದಿನಗಳ ಕಲಿಕೋಪಕರಣ ತಯಾರಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು. ಸೆಪ್ಟೆಂಬರ್ 2007ರಂದು ಶಿಕ್ಷಣ ಇಲಾಖೆ ಹಾಗೂ ಡಯಟ್ ಸಹಕಾರದೊಂದಿಗೆ ಡಿ.ಎಡ್.ವಿದ್ಯಾರ್ಥಿಗಳಿಗೆ ಕಲಿಕೋಪಕರಣ ಕಾರ್ಯಾಗಾರವನ್ನು ಮಂಗಳೂರಿನ ಡಯಟ್ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು ಹಾಗೂ ಇಲಾಖೆಯ ಸಹಕಾರದೊಂದಿಗೆ ವಾಮಂಜೂರಿನಲ್ಲಿ ಶಿಕ್ಷಕ ವಿದ್ಯಾರ್ಥಿಗಳಿಗೆ ಕಲಿಕೋಪಕರಣ ಕುರಿತು ಮಾಹಿತಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

**Posters Childline :** ಮಕ್ಕಳ ಹಕ್ಕುಗಳ ಕುರಿತು ಮಾಹಿತಿಯನ್ನು ಪ್ರಚಾರ ಪಡಿಸಲು ಇಲಾಖೆಯ ಸಹಕಾರದೊಂದಿಗೆ Childline 1098 ಮಾಹಿತಿಯನ್ನು Posters ಮುಖಾಂತರ ಪ್ರತೀ ಶಾಲೆಗಳಿಗೆ ಪೂರೈಸಲಾಗಿದೆ. ಈ ಮೂಲಕ ಮಕ್ಕಳಲ್ಲಿ, ಪೋಷಕರಲ್ಲಿ ಮಕ್ಕಳ ಹಕ್ಕುಗಳ ಕುರಿತು ಅರಿವು ಮೂಡಿಸುವ ಪ್ರಯತ್ನವನ್ನು ಇಲಾಖೆಯ ಸಹಕಾರದೊಂದಿಗೆ ಮಾಡಲಾಗಿದೆ.
**ಶಿಕ್ಷಣ ಮಾತುಕತೆ :** ಸಮುದಾಯದಲ್ಲಿ ಶಿಕ್ಷಣ ಚಿಂತನೆ ಮೂಡಿಸುವ ಹಾಗೂ ಮಕ್ಕಳ ಹಕ್ಕುಗಳ ಬಗ್ಗೆ ಅರಿವು ಮೂಡಿಸುವ ಗುಣಮಟ್ಟದ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ, ಶಿಕ್ಷಣಕ್ಕೆ ಸಂಬಂಧಿಸಿದ ಸರಕಾರಿ ಸುತ್ತೋಲೆಗಳು, ಶಿಕ್ಷಣಕ್ಕೆ ಸಂಬಂಧಿಸಿದ ಮಾಹಿತಿಯನ್ನು 'ಶಿಕ್ಷಣ ಮಾತುಕತೆ' ದ್ವೈಮಾಸಿಕ ಪತ್ರಿಕೆಯ ಮೂಲಕ ಪ್ರಕಟಿಸಲಾಗುತ್ತಿದೆ.

**ಹೆಣ್ಣು ಮಕ್ಕಳ ಜಾಗೃತಿ ಶಿಬಿರ :** 2005-2006ನೇ ಸಾಲಿನ ಹೆಣ್ಣು ಮಕ್ಕಳ ಜಾಗೃತಿ ಶಿಬಿರವನ್ನು ಪುತ್ತೂರು ಹಾಗೂ ಬಂಟ್ವಾಳ ತಾಲೂಕಿನಲ್ಲಿ ಇಲಾಖೆಯ ಸಹಕಾರದಲ್ಲಿ ಆಯೋಜಿಸಲಾಗಿದೆ.

ಹದಿಹರೆಯ, ಆರೋಗ್ಯ ಶಿಕ್ಷಣದ ಕುರಿತು ಹೆಣ್ಣು ಮಕ್ಕಳಿಗೆ ಮಾಹಿತಿ ನೀಡುವುದು ಹಾಗೂ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡುವುದು ಉದ್ದೇಶವಾಗಿದೆ.

**ಎಸ್.ಡಿ.ಎಂ.ಸಿ. ತರಬೇತಿ ಕೈಪಿಡಿ ಕಾರ್ಯಾಗಾರ :** 2005-2006ನೇ ಸಾಲಿನ ಎಸ್.ಡಿ.ಎಂ.ಸಿ. ತರಬೇತಿಗೆ ಪೂರಕವಾಗಿ ಮಾಹಿತಿ ಕೈಪಿಡಿಯನ್ನು ಇಲಾಖೆ ಹಾಗೂ ವೆಲೊರೆಡ್ ಸಹಭಾಗಿತ್ವದೊಂದಿಗೆ ತಯಾರಿಸಲಾಗಿದೆ.

**ಎಸ್.ಡಿ.ಎಂ.ಸಿ. ತರಬೇತಿ ಹಾಗೂ ಬೋಧನಾ ಕಲಿಕೋಪಕರಣ ತಯಾರಿಕೆ :** ರಾಷ್ಟ್ರೀಯ ಪಠ್ಯಕ್ರಮ ಕುರಿತು ಕಾರ್ಯಗಾರವನ್ನು ಇಲಾಖೆ ಹಾಗೂ ಶಿಕ್ಷಣ ಸಂಪನ್ಮೂಲ ಕೇಂದ್ರ ಉಡುಪಿ ಇದರ ವತಿಯಿಂದ ಉಡುಪಿ ಜಿಲ್ಲೆಯಲ್ಲಿ ತರಬೇತಿ ಆಯೋಜಿಸಲಾಗಿದೆ. ಅಲ್ಲದೆ ಎಸ್.ಡಿ.ಎಂ.ಸಿ. ತರಬೇತಿಯನ್ನು ಉಡುಪಿ ಜಿಲ್ಲೆಯಲ್ಲಿ ಆಯೋಜಿಸಲಾಗಿದೆ

**ಶಿಕ್ಷಕರಿಗೆ ನಿರಂತರ ಪುನಶ್ಚೇತನಾ ತರಬೇತಿ :** ನಿರಂತರ ಇಂಗ್ಲೀಷ್ ಬೋಧನೆ ಮೌಲ್ಯವರ್ಧನಾ ಕಾರ್ಯಗಾರವನ್ನು ಉಡುಪಿ ಹಾಗೂ ಕುಂದಾಪುರ ತಾಲೂಕಿನಲ್ಲಿ ಹಾಗೂ ಇಲಾಖೆಯ ಸಹಕಾರದೊಂದಿಗೆ ದ.ಕ.ಜಿಲ್ಲೆಯ ಬೆಳ್ತಂಗಡಿ ಹಾಗೂ ಪುತ್ತೂರೊ ತಾಲೂಕಿನಲ್ಲಿ ಆಯೋಜಿಸಲಾಗಿದೆ

**ಮೌಲ್ಯಾಂಕನ :** ಕೆ.ಎಸ್.ಕ್ಯೂ.ಎ.ಒ. ಮೌಲ್ಯಾಂಕನದ ಹಾಗೂ ಗುಣಮಟ್ಟ ಶಿಕ್ಷಣದ ಕುರಿತು ಸಮಾಲೋಚನಾ ಕಾರ್ಯಗಾರವನ್ನು ವೆಲೊರೆಡ್ ಸಹಭಾಗಿತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು.

**ಸಮಗ್ರ ಮಕ್ಕಳ ಗಣತಿ (ಸಿ.ಪಿ.ಇ. ಸರ್ವೆ) :** ಇಲಾಖಾ ವತಿಯಿಂದ 2005-2006, 2006-2007 ಸಾಲಿನ 0-14 ಎಲ್ಲಾ ಮಕ್ಕಳ ಸಮಗ್ರ ಗಣತಿಯಲ್ಲಿ ತೊಡಗಿಕೊಂಡಿರುವುದು.

**ರಂಗಭೂಮಿ ಮತ್ತು ಶಿಕ್ಷಣ :** ಶಿಕ್ಷಕರಿಗೆ ರಂಗಕಲೆ, ರಂಗಭೂಮಿ ಶಿಕ್ಷಣದ ಕುರಿತು 3 ದಿನಗಳ ತರಬೇತಿ ಕಾರ್ಯಗಾರವನ್ನು ಮುಲ್ಕಿಯಲ್ಲಿ ಇಲಾಖೆಯ ಸಹಭಾಗಿತ್ವದೊಂದಿಗೆ ಹಮ್ಮಿಕೊಳ್ಳಲಾಗಿತ್ತು.

**ಪಠ್ಯಪುಸ್ತಕ ಸ್ಥಳೀಕರಣ :** ಪಠ್ಯಪುಸ್ತಕ ಸ್ಥಳೀಕರಣ, ಪಠ್ಯದಲ್ಲಿ ತುಳುಭಾಷೆ ಅಳವಡಿಕೆ ಕುರಿತು ಶಿಕ್ಷಕರಿಗೆ ಕಾರ್ಯಗಾರವನ್ನು ಇಲಾಖೆ ಹಾಗೂ ತುಳು ಅಕಾಡೆಮಿಯ ಸಹಕಾರದಿಂದ ಹಮ್ಮಿಕೊಳ್ಳಲಾಗಿತ್ತು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು

## NGO 2: ಮಗು ಮಧುರ ಕಲಿಕೆ, ಮಂಗಳೂರು

ಮಗು ಮಧುರ ಕಲಿಕೆ ಯೋಜನೆಯು ಕಳೆದ ಆರು ವರ್ಷಗಳಿಂದ ಮಂಗಳೂರನ್ನು ಕೇಂದ್ರವಾಗಿಟ್ಟುಕೊಂಡು ಪ್ರಾಥಮಿಕ ಶಿಕ್ಷಣದ ಪರಿಣಾಮಕಾರಿ ಅನುಷ್ಠಾನ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಅದರಲ್ಲೂ ಹೆಣ್ಣುಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಿ ಪ್ರವರ್ತಿಸುತ್ತಿದೆ. 'ಎಲ್ಲಾ ಮಕ್ಕಳಿಗೂ ಸಮಾನ ಶಿಕ್ಷಣ, ಸಮಾನ ಅವಕಾಶ' ಎಂಬ ಮೂಲ ಆಶಯದೊಂದಿಗೆ ಶಿಕ್ಷಣದ ಸಾರ್ವತ್ರೀಕರಣ ಮತ್ತು ಗುಣಮಟ್ಟದ ಶಿಕ್ಷಣ ಸಾಧ್ಯತೆ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಶಿಕ್ಷಕರು ಪರಿಕಲ್ಪನಾತ್ಮಕವಾಗಿ ಮತ್ತು ಶೈಕ್ಷಣಿಕವಾಗಿ ಸದೃಢವದಾಗ ಮಾತ್ರ ಕಲಿಕೆ ಹೆಚ್ಚು ಪರಿಣಾಮಕಾರಿಯಾಗಬಹುದು. ಶಿಕ್ಷಣ ಎನ್ನುವುದು ಮಕ್ಕಳನ್ನು ಸಮಾಜಮುಖಿಯಾಗಲು ದಾರಿ ತೋರಿಸಲು ಸಾಧ್ಯವಾಗಬಹುದು. ಶಿಕ್ಷಣ ಎನ್ನುವುದು ಬರೀ ಅಕ್ಷರ ಅಂಕಿಗಳ ಕಲಿಕೆಯಲ್ಲ ಅದು ಬದುಕು. ಬದುಕು ರೂಪಿಸುವ ವಿನ್ಯಾಸ ಕೂಡಾ. ಆದ್ದರಿಂದ ಅದು ಸಶಕ್ತವಾಗಲೇಬೇಕು. ಎಲ್ಲಾ ಪ್ರಯತ್ನಗಳ ಮಧ್ಯೆಯೂ ಹೆಣ್ಣುಮಕ್ಕಳ ಶಿಕ್ಷಣ ಇನ್ನೂ ಬಹಳ ದೂರ ಉಳಿದಿದೆ. ಇತ್ತೀಚೆಗೆ ಶಾಲೆ ಕಲಿಯುತ್ತಿರುವ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚಾಗಿದೆ ಸತ್ಯ. ಆದರೆ ಇದರಿಂದ ಅವರ ಬದುಕು ಸುಸ್ಥಿರಗೊಂಡಿದೆಯೇ? ಸಶಕ್ತಗೊಂಡಿದೆಯೇ, ಸಮಾಜದಲ್ಲಿ ಎರಡನೇ ದರ್ಜೆಯ ಸ್ಥಿತಿಯಿಂದ ಹೊರಬಂದಿದ್ದಾಳೆಯೇ? ಎಂಬುದು ಒಂದು ದೊಡ್ಡ ಸವಾಲೇ.

ಆದ್ದರಿಂದ ಶಿಕ್ಷಣ ನಿಜವಾದ ಅರ್ಥದಲ್ಲಿ ಮಗುವಿನ ಆ ಮೂಲಕ ಸಮಾಜದ–ದೇಶದ ಸರ್ವತೋಮುಖ ಅಭಿವೃದ್ಧಿಗೆ ಬುನಾದಿ ಆಗಬೇಕಾಗಿದೆ. ಇದಕ್ಕೆ ಒಂದು ಲವಲವಿಕೆಯ, ಪರಿಣಾಮಕಾರಿ ಶೈಕ್ಷಣಿಕ ಶಾಲಾ ವಾತಾವರಣ, ಸಮರ್ಥವಾದ ಬೋಧನಾ ವ್ಯವಸ್ಥೆ, ಕಾಳಜಿಯುಕ್ತ ಸಮುದಾಯ, ಕಾರ್ಯತತ್ಪರ ಸ್ಥಳೀಯ ವ್ಯವಸ್ಥೆ ಇದೆಲ್ಲವೂ ಅಗತ್ಯ. ಇವೆಲ್ಲವುಗಳ ಸಂಯೋಜಿತ ವ್ಯವಸ್ಥೆ ಸಾಧ್ಯವಾಗಲು ಆ ಮೂಲಕ ಈ ಸಮಾಜದ ಎಲ್ಲಾ ಮಕ್ಕಳಿಗೂ ಅವರ ಬದುಕು ಪೂರಕವಾದ ಸ್ಥಳೀಯ ಅಭಿವೃದ್ಧಿಯ ಬೇಡಿಕೆಯನ್ನು ಈಡೇರಿಸಬಲ್ಲ ಗುಣಮಟ್ಟದ ಶಿಕ್ಷಣ ಲಭ್ಯಗೊಳಿಸುವ ನಿಟ್ಟಿನಲ್ಲಿ ಮಗು ಮದುರ ಕಲಿಕೆಯು ನಮ್ಮ ಜಿಲ್ಲೆಯಲ್ಲಿ ಇಲಾಖೆಯ ಜತೆಗೆ ಮತ್ತು ಇತರ ಸಂಸ್ಥೆಗಳ ಜತೆಗೆ ಕೈಜೋಡಿಸಿಕೊಂಡು ಕೆಲಸ ಮಾಡುತ್ತಿದೆ.

ಈ ನಿಟ್ಟಿನಲ್ಲಿ ಶಿಕ್ಷಕರು, ಮಕ್ಕಳು, ಪೋಷಕರು ಸೇರಿದಂತೆ ಶಾಲೆ, ಸಮುದಾಯ ಪ್ರತಿನಿಧಿಗಳು, ಸ್ಥಳೀಯ ಸಂಘಸಂಸ್ಥೆಗಳು, ಜನಪ್ರತಿನಿಧಿಗಳು, ಇಲಾಖೆಗಳ ಜತೆಗೆ ನೇರ ಕೆಲಸ ಮಾಡುತ್ತಿದೆ. ಇದಕ್ಕಾಗಿ ಮಕ್ಕಳಲ್ಲಿ ಕಲಿಕೆಯಲ್ಲಿ ಆಸಕ್ತಿ ಮೂಡಿಸುವ ಕಾರ್ಯಾಗಾರಗಳು, ಆರೋಗ್ಯ ಮತ್ತು ಸಾಮಾಜಿಕ ಮೌಲ್ಯ ಪ್ರತಿಪಾಧನಾ ಕಾರ್ಯಾಗಾರಗಳು, ಶಿಕ್ಷಕರಿಗೆ ಪರಿಕಲ್ಪನಾತ್ಮಕ(ಲಿಂಗತ್ವ, ರಾಷ್ಟ್ರೀಯ ಶಿಕ್ಷಣ ನೀತಿ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಶೈಕ್ಷಣಿಕ ಮೌಲ್ಯಗಳು–ಸಿದ್ಧಾಂತಗಳು, ಗುಣಮಟ್ಟದ ಶಿಕ್ಷಣದ ಆಶಯ, ಮಕ್ಕಳ ಹಕ್ಕುಗಳು, ಬಾಲಕಾರ್ಮಿಕತ್ವ ಇತ್ಯಾದಿ) ಮತ್ತು ಶೈಕ್ಷಣಿಕ (ಪಠ್ಯ ಸಂಬಂಧಿ ವಿಧಾನ, ಸಾಮಗ್ರಿ ತಯಾರಿ, ಸಾಮಗ್ರಿ ಬಳಕೆ, ಬಹುವರ್ಗ ಬೋಧನೆ, ಪಾಠ ವಿನ್ಯಾಸ ಇತ್ಯಾದಿ), ಸಮುದಾಯ ಪ್ರತಿನಿಧಿಗಳಿಗೆ ಸಮುದಾಯ ಭಾಗವಹಿಸುವಿಕೆ, ಎಸ್.ಡಿ.ಎಮ್.ಸಿ., ಶಿಕ್ಷಣ ಸಾರ್ವತ್ರೀಕರಣ, ಬಾಲಕಾರ್ಮಿಕತ್ವ, ಜನಪ್ರತಿನಿಧಿಗಳಿಗೆ, ಸ್ಥಳೀಯ ಸಂಘಸಂಸ್ಥೆ ಪ್ರತಿನಿಧಿಗಳಿಗೆ ಬೇರೆ ಬೇರೆ ಶೈಕ್ಷಣಿಕ ಮತ್ತು ಶಿಕ್ಷಣ ಪೂರಕ ವಿಷಯಯಗಳ ಬಗೆಗೆ ತರಬೇತಿ ನೀಡಿರುತ್ತಾರೆ.

ಸಂಸ್ಥೆಯು ಇಲಾಖೆಯ ಜತೆಗೆ ಮತ್ತು ವೈಯಕ್ತಿಕವಾಗಿ ಹಲವು ರಾಜ್ಯಮಟ್ಟದ ಕಾರ್ಯಾಗಾರಗಳು, ಜಿಲ್ಲಾ ಮಟ್ಟದ ಶೈಕ್ಷಣಿಕ ಆಂದೋಲನಗಳನ್ನು ಹಮ್ಮಿಕೊಂಡಿದೆ.

ಪಠ್ಯಪೂರಕ ಕೈಪಿಡಿಗಳು, ಮಾರ್ಗದರ್ಶಿ ಕೈಪಿಡಿಗಳು, ಅಧ್ಯಯನಗಳನ್ನು ಹಮ್ಮಿಕೊಂಡಿದೆ. ಶೈಕ್ಷಣಿಕ ಚಿಂತನೆಗೆ ಪೂರಕವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಕೆಲಸ ಮಾಡುವ ಸಂಸ್ಥೆಗಳು ಮತ್ತು ಶೈಕ್ಷಣಿಕ ಚಿಂತಕರನ್ನು ಒಟ್ಟುಗೂಡಿಸಿ ಶೈಕ್ಷಣಿಕ ವೇದಿಕೆಗೆ ಒತ್ತುಕೊಟ್ಟು ಕೆಲಸ ಮಾಡಿದೆ.

ಅಲ್ಲದೆ ಹಾವೇರಿ, ಕೊಪ್ಪಳ, ಚಾಮರಾಜನಗರ ಜಿಲ್ಲೆಗಳಲ್ಲಿ ಶಾಲೆಯಿಂದ ಹೊರಗಿರುವ ಮಕ್ಕಳ ಶೈಕ್ಷಣಿಕ ಮುಖ್ಯವಾಹಿನಿ ಮತ್ತು ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಿಸಿ ಕೆಲಸ ಮಾಡಿದೆ.

ಸಂಸ್ಥೆಯ ಕೆಲವು ಪ್ರಮುಖ ಚಟುವಟಿಕೆಗಳು

- ಮಂಗಳೂರು ಮತ್ತು ಹಂಪಿಯಲ್ಲಿ ದಕ್ಷಿಣ ಕರ್ನಾಟಕ ಮತ್ತು ಉತ್ತರ ಕರ್ನಾಟಕದ ಭೌಗೋಳಿಕ ಸಾಮಾಜಿಕ ಸಾಂಸ್ಕೃತಿಕ ಸಂದರ್ಭಗಳನ್ನು ಪರಿಗಣಿಸಿ, ಸ್ಥಳೀಯತೆಗೆ ಒತ್ತುಕೊಟ್ಟು, (ಸ್ಥಳೀಯ ಸಂಪನ್ಮೂಲಗಳನ್ನು ಬಳಸಿ ಮಾಡಲು ಸಾಧ್ಯವಿರುವಂತೆ)ಪ್ರಸಕ್ತ ಪಠ್ಯಕ್ರಮಕ್ಕೆ ಅನುಗುಣವಾಗಿ ಪೂರಕ ಸಾಮಗ್ರಿಗಳ ಶಿಕ್ಷಕರ ಕೈಪಿಡಿ ರಚನಾ ಕಾರ್ಯಾಗಾರಗಳು(ಇಲಾಖೆಯ ಸಹಕಾರದೊಂದಿಗೆ).
- ಯೋಜನೆಯ ಬಗೆಗೆ ಶಿಕ್ಷಕರ ಕೈಪಿಡಿ
- ಹಾವೇರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಬ್ರಿಜ್ ಶಾಲೆ, ಪೂರಕ ಶಾಲೆ ಶಿಕ್ಷಕರಿಗೆ ಮತ್ತು ಸಮುದಾಯ ನಾಯಕರಿಗೆ ಸಾಮರ್ಥ್ಯಾಭಿವೃದ್ಧಿ ಸರಣಿ ಕಾರ್ಯಾಗಾರಗಳು
- ಶೈಕ್ಷಣಿಕ ತರಬೇತಿ ಕೈಪಿಡಿ(ಇಂಗ್ಲಿಷ್ ಭಾಷೆಯಲ್ಲಿ)
- ಶಿಕ್ಷಕರಿಗೆ ಮತ್ತು ಪಠ್ಯರಚನೆಯಲ್ಲಿ ತೊಡಗುವವರಿಗೆ ಲಿಂಗಸೂಕ್ಷ್ಮತಾ ಮಾರ್ಗದರ್ಶಿ ಕೈಪಿಡಿ
- ಐದು ಮತ್ತು ಆರನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕಗಳಿಗೆ ವಿಶೇಷ ಪೂರಕ ಸಾಮಗ್ರಿ
- ಶಿಕ್ಷಕರಿಗೆ ವಿಷಯಾದಾರಿತ ಬೋಧನಾ ವಿಧಾನ ಮತ್ತು ಸಾಮಗ್ರಿ ತಯಾರಿ ತರಬೇತಿಗಳು (ಇಲಾಖೆಯ ಸಹಕಾರದೊಂದಿಗೆ)
- ಶಿಕ್ಷಕರಿಗೆ ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ಲಿಂಗತ್ವ ತರಬೇತಿಗಳು(ಮಂಗಳೂರು ಡಯಟ್ ಮೂಲಕ)
- ಶಿಕ್ಷಣ ಮತ್ತು ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ವಿಚಾರ ಸಂಕಿರಣ, ಕಾರ್ಯಾಗಾರಗಳು
- ಹೆಣ್ಣುಮಕ್ಕಳ ಶಿಕ್ಷಣದ ಬಗೆಗೆ ಶಿಕ್ಷಕರಿಗೆ, ಸಮುದಾಯ ಪ್ರತಿನಿಧಿಗಳಿಗೆ, ಜನಪ್ರತಿನಿಧಿಗಳಿಗೆ ಕಾರ್ಯಾಗಾರಗಳು
- ಮಕ್ಕಳ ಆರೋಗ್ಯದ ಬಗೆಗೆ ಶಿಕ್ಷಕರಿಗೆ, ಸಮುದಾಯ ಪ್ರತಿನಿಧಿಗಳಿಗೆ, ಜನಪ್ರತಿನಿಧಿಗಳಿಗೆ ಕಾರ್ಯಾಗಾರಗಳು
- ಮಕ್ಕಳಿಗಾಗಿ ಆರೋಗ್ಯ ಕಾರ್ಯಾಗಾರಗಳು.
- ಗುಣಮಟ್ಟದ ಶಿಕ್ಷಣಕ್ಕೆ ಸಂಬಂಧಿಸಿದಂತೆ ಕಾರ್ಯಾಗಾರಗಳು.
- ಶೈಕ್ಷಣಿಕ ಅಧ್ಯಯನಗಳು.

- ಸಮುದಾಯ ಭಾಗವಹಿಸುವಿಕೆ ಮೂಲಕ ಶಾಲಾ ಸೂಕ್ಷ್ಮ ಯೋಜನೆ ತಯಾರಿ.
- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರಿಗೆ ತರಬೇತಿಗಳು.
- ಮಕ್ಕಳ ಕ್ರಿಯಾತ್ಮಕ ಕಾರ್ಯಾಗಾರಗಳು .
- ಹೆಣ್ಣುಮಕ್ಕಳ ದಾಖಲಾತಿ ಸಪ್ತಾಹ.
- ಮಗುಸ್ನೇಹಿ ಶಾಲಾ ವಾತಾವರಣ ನಿರ್ಮಾಣಕ್ಕೆ ಪೂರಕ ಪ್ರವರ್ತನೆ.
- ಸರ್ವ ಶಿಕ್ಷಣ ಅಭಿಯಾನ ದ.ಕ. ಸಹಭಾಗಿತ್ವದಲ್ಲಿ ಜಿಲ್ಲಾಮಟ್ಟದ 'ಹೆಣ್ಣುಮಕ್ಕ ಶಿಕ್ಷಣ ಜಾಗೃತಿ ಆಂದೋಲನ'.
- ಹೆಣ್ಣುಮಕ್ಕಳ ಶಿಕ್ಷಣಕ್ಕೆ ಸಂಬಂದಿಸಿದಂತೆ ಇಲಾಖೆ, ಮಂಗಳೂರು ವಿ.ವಿ., ಡೀಡ್ಸ್ ಸಂಸ್ಥೆಗಳ ಸಹಭಾಗಿತ್ವದಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣಗಳು.
- ಶಿಕ್ಷಕರಿಗೆ ಲಿಂಗತ್ವ ಸಂಬಂಧಿ ತರಬೇತಿ ಕೈಪಿಡಿ.
- ಹೆಣ್ಣುಮಕ್ಕಳ ಹದಿಹರೆಯದ ಕಾರ್ಯಾಗಾರಗಳ ಸಂಯೋಜನೆ(ಸ.ಶಿ.ಅ.)
- ಸ.ಶಿ.ಅ. ಹಾಗೂ ಶಿಕ್ಷಣ ಮತ್ತು ಬೇರೆ ಬೇರೆ ಇಲಾಖೆಗಳ ಬೇರೆ ಬೇರೆ ಸಮಿತಿಗಳಲ್ಲಿ ಭಾಗಿ, ಇತ್ಯಾದಿಗಳು.

ಗೋಪಿನಾಥ ಕಲಭಾಗ
ಉಪನ್ಯಾಸಕರು
ಡಯಟ್, ಮಂಗಳೂರು